SRI S. R. BOMMAI.—Whether there was any act. on the presentation by the Union ?

ಆರ್. ಎಸ್. ಪಾಟೀಲ್.—ಕಾರ್ಮಿಕರಿಂದ ಈವರೆಗೆ ನನಗೆ ಯಾವುದಿಧಪಾದ ದೂರುಗಳೂ ಬಂದಿಲ್ಲ.

Matters Under Rule 312

(i) *re : Misappropriation of funds at the Agro Industries Corporation and hunger Strike by the President of its Employees Associations*

† SRI S S ARAKERI (Ballolli) :—Sir, I raise a matter under rule 312 regarding misutilisation and misappropriation of funds in Karnataka Agro Industries Corporation and hunger strike by the President of said employees association

ಸನ್‌ಮಾನ್ಯ ಅಧ್ಯಕ್ಷರೇ ಕರ್ನಾಟಕ ಆಗ್ರೋಇಂಡಸ್ಟ್ರೀಸ್ ಕಾರ್ಪೊರೇಷನ್ ಎಂದು ಏನು ಇರುತ್ತದೆ ಅಲ್ಲಿ ಬಹಳ ಗಂಭೀರವಾದ ವಾತಾವರಣ ನಿರ್ಮಾಣವಾಗಿರುತ್ತದೆ. ಅಲ್ಲಿ ಸುಮಾರು ನಾಲ್ಕುವರೆ ಕೋಟಿ, ಐದು ಕೋಟಿ ರೂಪಾಯಿಗಳಷ್ಟು ಅಪವ್ಯಯವಾಗಿದೆ. ಇಷ್ಟೇ ಅಲ್ಲ ಅಲ್ಲಿ ನಾವು ವಿವರಗಳನ್ನು ನೋಡಿದಾಗ ಮಿಸ್‌ಯುಟಿಲೈಸೇಶನ್ ಮತ್ತು ಮಿಸ್ ಅಪ್ರೋಪ್ರಿಯೇಷನ್ ಎಷ್ಟು ಗಂಬೀರವಾಗಿ ನಡೆದಿದೆ ಎನ್ನುವುದು ಕಂಡುಬರುತ್ತದೆ. ಮಾನ್ಯ ಸಚಿವರು ಎರಡು ವರ್ಷದ ಹಿಂದೆ ಉತ್ತರವನ್ನು ಕೊಡುತ್ತಿರುವಾಗ ಅವರು ಕೂಡ ಒಪ್ಪಿಕೊಂಡಿದ್ದರು. ಒಂದು ವರ್ಷಕ್ಕೆ ಒಂದೂವರೆ ಕೋಟಿ ಪ್ರಕಾರ ಕಳೆದ ೧೯೭೫-೭೬ನೇ ಸಾಲಿನಿಂದ ೧೯೭೭-೭೮ನೇ ಸಾಲಿನವರೆಗೆ ನಾಲ್ಕುವರೆ ಕೋಟಿ ರೂಪಾಯಿಗಳವರೆಗೂ ಲುಕ್ಸಾನು ಆಗಿದೆ. ಇದು ವ್ಯಾಪಾರ ದೃಷ್ಟಿಯಿಂದ ನಷ್ಟವಾಗಿರುತ್ತದೆಯೇ ಹೊರತು ಮತ್ತ್ಯಾವದೃಷ್ಟಿಯಿಂದಲೂ ಅಲ್ಲ ಎಂದು ಮಾನ್ಯ ಕೃಷಿ ಸಚಿವರು ಹೇಳಿದ್ದಾರೆ. ಆದರೆ ಈ ವಿಷಯವನ್ನು ಸರ್ಕಾರದವರಾಗಲಿ ಕೃಷಿ ಸಚಿವರಾಗಲಿ ಲಘುವಾಗಿ ತೆಗೆದುಕೊಳ್ಳದೆ ಪರಿಣಾಮಕಾರಿಯಾಗಿ ಅಲ್ಲಿ ಏನು ಅವ್ಯವಹಾರ ನಡೆದಿರುತ್ತದೆ ಅದರ ಬಗ್ಗೆ ಸಂಪೂರ್ಣವಾಗಿ ತನಿಖೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಮತ್ತೆ ಅಲ್ಲಿ ಕೆಲಸ ಮಾಡತಕ್ಕಂಥ ನೌಕರರ ಮುಂದಿನ ಭವಿಷ್ಯದ ಬಗ್ಗೆಯೂ ಸರ್ಕಾರದ ಗಮನಕ್ಕೆ ಅನೇಕ ಸಾರಿ ತಂದಿದ್ದೇವೆ. ಈ ರೀತಿ ಸರ್ಕಾರದ ಗಮನಕ್ಕೆ ತಂದಿದ್ದರೂ ಕೂಡ ಸರ್ಕಾರದವರು ಪರಿಶೀಲನೆ ಮಾಡದೆ ಇರುವುದರಿಂದ ಅವರಿಗೆ ಬಹಳ ಅನ್ಯಾಯವಾಗುತ್ತಿದೆ. ಕಾರ್ಮಿಕರ ಸಂಘದ ಅಧ್ಯಕ್ಷರಾದ ಶ್ರೀ ಆಲಂಪಲ್ಲಿ ವೆಂಕಟರಮಣರವರೂ ಸಹ ಸರ್ಕಾರದ ಗಮನ ಸೆಳೆಯುವ ಸಲುವಾಗಿ ನೌಕರರ ಬೇಡಿಕೆಗಳನ್ನು ಸರ್ಕಾರದ ಗಮನಕ್ಕೆ ತಂದಿರುತ್ತಾರೆ ಇದನ್ನು ಪರಿಶೀಲನೆ ಮಾಡಬೇಕೆಂತಲೂ ಮತ್ತು ಅಲ್ಲಿ ನಡೆದಿರತಕ್ಕಂಥ ಅವ್ಯವಹಾರಗಳ ಬಗ್ಗೆ ಸಂಪೂರ್ಣಪಾದಂಥ ತನಿಖೆ ನಡೆಸಬೇಕೆಂದೂ ಕೇಳಿಕೊಳ್ಳುತ್ತೇನೆ.

11-00 ಪಿ.ಎಂ.

ಇದರ ಬಗ್ಗೆ ಸರ್ಕಾರದವರು ಸಂಪೂರ್ಣವಾಗಿ ತನಿಖೆಯನ್ನು ನಡೆಸದಿದ್ದರೆ ಮುಂದೆ ಬಹಳ ತೊಂದರೆಯಾಗುತ್ತದೆ. ಅಲ್ಲಿ ನಡೆಯುತ್ತಿರುವ ಅವ್ಯವಹಾರಗಳ ಹೀಗೇಯೆ ಮುಂದುವರೆದರೆ ಆಗ್ರೋ ಇಂಡಸ್ಟ್ರೀಸ್ ಕಾರ್ಪೊರೇಷನ್ನನ್ನು ಮುಚ್ಚುವ ಪರಿಸ್ಥಿತಿ ಬಂದು ಅಲ್ಲಿನ ನೌಕರರು ಬೀದಿಪಾಲಾಗುವಂಥ ಪರಿಸ್ಥಿತಿ ನಿರ್ಮಾಣವಾಗುತ್ತದೆ. ಮುಂದೆ ಈ ಪರಿಸ್ಥಿತಿ ನಿರ್ಮಾಣವಾಗಬಾರದು ಎಂಬ ದೃಷ್ಟಿಯಿಂದ ನಾನೆ ಮಾನ್ಯ ಕೃಷಿ ಸಚಿವರನ್ನು ಕೇಳಿಕೊಳ್ಳುತ್ತೇನೆ. ನೌಕರರು ಉಪವಾಸ ಕುಳಿತಿರುವುದನ್ನು ತಪ್ಪಿಸಿ ಮಾನವೀಯತೆಯ ದೃಷ್ಟಿಯಿಂದ ಸಮಸ್ಯೆಯನ್ನು ಪರಿಹಾರ ಮಾಡಬೇಕು. ಮತ್ತು ಅಲ್ಲಿ ನಡೆದಿರತಕ್ಕ ಅವ್ಯವಹಾರಗಳ ಬಗ್ಗೆ ಸಂಪೂರ್ಣವಾದಂಥ ತನಿಖೆಯನ್ನೂ ಮಾಡಬೇಕು. He must try to solve the problems of the employees of the Agro-Industries Corporation and all the serious lapses on the part of the praesent management either through the Managing Director or the Chairman must be enquired into. ಮಾನ್ಯ ಸಚಿವರು ಮೊದಲು ಕೂಡಲೇ ಒಂದು ಆಶ್ವಾಸನೆಯನ್ನು ಕೊಟ್ಟು

ಉಪವಾಸ ಸತ್ಯಾಗ್ರಹವನ್ನು ನಿಲ್ಲಿಸಬೇಕು. ಅಲ್ಲಿಪರಿಜನಗಿರಿಜನರಿಗೆ ಬಹಳ ಅನ್ಯಾಯವಾಗಿದೆ. ಇದನ್ನೆಲ್ಲಾ ಗಮನಿಸಿದಾಗ ಅಲ್ಲಿನ ಆಡಳಿತ ವರ್ಗದವರು ತಮ್ಮ ಮನೆಯ ಸ್ವಂತ ಆಸ್ತಿ ಎಂದು ತಿಳಿದು ಕೊಂಡು ನಡೆಯುತ್ತಿದ್ದಾರೆಂದು ಗೊತ್ತಾಗುತ್ತದೆ. ೪೦೦ ಬುಲ್ಡೋಜರ್‌ಗಳು ಕೆಲಸ ಮಾಡುತ್ತಿಲ್ಲ. ಕಾರ್ಮಿಕರಲ್ಲಿ ಅಶಾಂತಿ ನಿರ್ಮಾಣವಾಗಿದೆ. ಆದ್ದರಿಂದ ಮಾನ್ಯ ಸಚಿವರು ಇದನ್ನೆಲ್ಲಾ ಗಮನದಲ್ಲಿಟ್ಟು ಕೊಂಡು ಸಂಪೂರ್ಣವಾದ ತನಿಖೆಯನ್ನು ಮಾಡಿ ಕಾರ್ಮಿಕರ ನ್ಯಾಯಸಮ್ಮತವಾದ ಬೇಡಿಕೆಗಳನ್ನು ಈಡೇರಿಸಬೇಕೆಂದು ಕೇಳಿಕೊಳ್ಳುತ್ತೇನೆ.

(Madam Deputy Speaker in the Chair)

† SRI S. R. BOMMAI (Hubli) :—Madam, I would like to make it dear in the beginning that so far as the affairs of the Agro-Industries Corporation are concerned, there are serious allegations misappopriation, mis-application and misutilisation of funds, property and authority. A White Paper has been circulated and I would like to say that all the black things that are existing in the Agro-Industries Corporation are being tried to be whitewashed by this White paper. There are a number of allegations and it is admitted by the Government itself that there is a loss of Rs. 4.89 crores since the inception of the Corporation. The trading accounts given in the White Paper would disclose that there is no reason for the incurring ofoss. Even in the sale of fertiliser during the last so many years there has been a profit of 60 lakhs and 90 lakhs per annum. There are serious allegations against the Chairman and the Managing Director in purchase, sale, transport, storage and other things. I would like to have a detailed discussion after studying both the White Paper and the allegations made by the employees, the Press and others So, I will not go into the details now. I would like to give notice of Two-and-a-Half Hour Discussion and on that occasion we can examine in detail the working of the Corporation. But the question remains about the hunger strike by the employees that is going on. The employees' union was legally constituted and it was lecognised by the Corporation and it was also to function in the premises of the Corporation.

† SRI K. H. RANGANATH (Minister for Agriculture & Parliaeu-tary Affairs) :—Madam Speaker, may I submit that this point inot mentioned in the notice.' Let us confine ourselves to the matters mentioned in the notiec I am happy the Leader of the Opposition was kind enough to say that he would iutiate discussion.

SRI S. R. BOMMAI :—I have mentioned hunger stri e by the President of the employees' union. Their grievances are already given to you and they are, de-recognation of the union, transfer of the office bearers of the union against the accepted code of Conduct it haraasment of the employe s, etc.T hese are the allegatios and on this basis the labour leader is on hunger strike. Without

going into merits and without going into the demands and allegation of the employees, I would appeal to tke Hon. Minister for Agriculture to discuss the matter with the leaders. I would also appeal to the workers through you, Madam, to end the hunger strike because this House will discuss in detail the entire affairs of the Corporation including their demands. After discussion in the house much light will be thrown on the affairs of the Corporation and then I am sure the Hon. Minister will not hesitate to take necessary action against the persons, however highly placed and politically influential they may be, if they are found to be guilty. At the momert I would only request the Hon. Minister to have discussion with the labour leadesr and see that the hunger strike is ended.

ಶ್ರೀ ಪಿ. ರಾಮ್‌ದೇವ್ :—ನಾನು ರೂಲ್ ೫೧ರ ಪ್ರಕಾರ ನೋಟೀಸ್ ಕಳುಹಿಸಿದ್ದೇನೆ. ಈಗ ನಮ್ಮ ನಾಯಕರು ಎಲ್ಲ ವಿಷಯಗಳನ್ನು ವಿವರವಾಗಿ ಹೇಳಿದ್ದಾರೆ. ಆದ್ದರಿಂದ ನಾನು ಆ ವಿಷಯ ಪಾಗಿ ಹೆಚ್ಚು ಮಾತನಾಡುವುದಕ್ಕೆ ಹೋಗುವುದಿಲ್ಲ. ಇನ್ನೊಂದು ದಿವಸ ಅವಕಾಶ ಸಿಕ್ಕಿದಾಗ ಹೆಚ್ಚು ವಿಷಯಗಳನ್ನು ಹೇಳಬಹುದು ಎಂದು ಅಂದುಕೊಂಡಿದ್ದೇನೆ. Agro Industries Corporation ಬಗ್ಗೆ ಸರ್ಕಾರದವರು ವೈಟ್‌ಪೇಪರ್ ಕೊಟ್ಟಿದ್ದಾರೆ. ಆಗ್ರೋ-ಇಂಡಸ್ಟ್ರೀಸ್ ಕಾರ್ಪೊರೇಷನ್ ವಿಚಾರದಲ್ಲಿ ಇರತಕ್ಕ ನಿಜವಾದ ವಿಚಾರವನ್ನು ಕಾರ್ಮಿಕರ ಮಾನ್ಯ ಸಚಿವರ ಗಮನಕ್ಕೆ ತಂದಿದ್ದಾರೆ. ಸುಮಾರು ೩ಸಾವಿರ ಕೆಲಸಕಾರರ ಭವಿಷ್ಯ ಆಗ್ರೋ ಇಂಡಸ್ಟ್ರೀಸ್ ಕಾರ್ಪೊರೇಷನ್ ಮೇಲೆ ನಿಂತಿದೆ. ಅವರು ಸಾಕಷ್ಟು ಚಾರ್ಜಸ್ ಮಾಡಿದ್ದಾರೆ. ಅಲ್ಲಿರತಕ್ಕಂಥ ದುಷ್ಟಕೂಟ ಇದೆ. ಚೇರ್ಮನ್ ಮ್ಯಾನೆಜಿಂಗ್ ಡೈರೆಕ್ಟರ್, ಮತ್ತೆ ಆಲ್ಲಿರತಕ್ಕಂಥ ಸೆಕ್ರೆಟರಿ ಇವರು ಸೇರಿಕೊಂಡು ಸುಮಾರು ೬ ಕೋಟಿ ರೂಪಾಯಿ ಹಾಳು ಮಾಡಿರತಕ್ಕಂಥವರು ಲೂಟಿ ಮಾಡಿರತಕ್ಕ ಒಂದು ಕೆಲಸ ಮಾಡಿದ್ದಾರೆ. ಆದ್ದರಿಂದ ತಾವು ದಯಮಾಡಿ ತಕ್ಷಣವೇ ಈ ಮೂರು ಜನರ ಮೇಲೆ ಸೂಕ್ತಕ್ರಮ ತೆಗೆದುಕೊಳ್ಳಬೇಕೆಂದು ಹೇಳುವುದಕ್ಕೆ ಇಷ್ಟಪಡುತ್ತೇನೆ,

SRI K. H. RANGANATH :—I rise to a Point of Order, ಮಾನ್ಯ ಸದಸ್ಯರು ಆಜ್ಞಾಪನೆ ಮಾಡುತ್ತಿದ್ದಾರೆ. ಏನೋ ಹೇಳುವುದಕ್ಕೆ ಹೋಗುತ್ತಿದ್ದಾರೆ. ಅವರು ನೇರವಾಗಿ ೩ ಜನರ ಮೇಲೆ ಹೇಳುತ್ತಿದ್ದಾರೆ. ಅವರು ಇಲ್ಲಿ ಇಲ್ಲ. ಅವರು ಇಲ್ಲಿಗೆ ಬಂದು ಡಿಫೈಂಡ್ ಮಾಡಿಕೊಳ್ಳುವುದಕ್ಕೆ ಅವರಿಗೆ ಅವಕಾಶ ಇಲ್ಲ. ಆದ್ದರಿಂದ ನಾವು ಬಹಳಮಟ್ಟಿಗೆ ವಿಷಯಕ್ಕೆ ರಿಸ್ಟ್ರಿಕ್ಟ್ ಆಗಿ ಮಾತನಾಡತಕ್ಕಂಥಾದು ಒಳ್ಳೆಯದು. ನಮಗೆ ಈ ಸಭೆಯಲ್ಲಿ ಪ್ರಿವಿಲೇಜ್ ಇದೆ ಎಂಬುದಾಗಿ ತಿಳಿದುಕೊಂಡು ಹೇಳುವುದು ಆಷ್ಟೊಂದು ಸಮಂಜಸವಾಗಲಾರದು, ತಮಗೆ ಅಂಕಿ ಅಂಶಗಳನ್ನು ಕೊಟ್ಟಿದ್ದೇವೆ. ಅದನ್ನು ಇಟ್ಟುಕೊಂಡು ಮಾತನಾಡುವಾಗ ಒಪ್ಪಿಕೊಳ್ಳತಕ್ಕಂಥ ಪರಿಸ್ಥಿತಿ ಬಂದರೆ ನೋಡೋಣ. ಇನ್ನು ಆ ಒಂದು ಪರಿಸ್ಥಿತಿಗೆ ಬಾರದೆ ಇರುವಾಗ ಕೊಟ್ಟಿರತಕ್ಕಂಥ ವಿಷಯವನ್ನು ಬಿಟ್ಟು ಬೇರೆ ಮಾತನಾಡುವುದು ಆಷ್ಟೊಂದು ಸರಿ ಹೋಗುವುದಿಲ್ಲ. ಈ ಸಭೆಯಲ್ಲಿ ತಮ್ಮ ಮೇಲೆ ಕ್ರಮ ತೆಗೆದುಕೊಳ್ಳುವುದಕ್ಕೆ ಅವರಿಗೆ ಅವಕಾಶ ಇಲ್ಲ. ಅದೇ ರೀತಿ ಹೊರಗಡೆ ಈ ರೀತಿ ಮಾತನಾಡಿದರೆ ಅವರು ನಿಮ್ಮ ಮೇಲೆ ಕ್ರಮ ತೆಗೆದುಕೊಳ್ಳಬಹುದು, ಈ ವಿಚಾರವನ್ನು ಹೇಳಿದರೆ ಜನರಿಗೆ ಏನೊಂದು ಒಂದು ಕಲ್ಪನೆಯಾಗಿ ಇದು ಸರಿಯೇನೋ ಎಂಬುದಾಗಿ ಆಗುತ್ತದೆ. ಆದ್ದರಿಂದ ಮಾನ್ಯ ಸದಸ್ಯರು ಆಷ್ಟಕ್ಕೆ ಹೋಗುವುದು ಬೇಡ. ಚರ್ಚೆ ಮಾಡಬೇಕೆಂದು ಮಾನ್ಯ ವಿರೋಧಪಕ್ಷದವರು ಹೇಳಿದ್ದಾರೆ. ಅವಕ್ಕೆ ಅಂಕಿ ಅಂಶಗಳನ್ನು ಕೊಟ್ಟಿದ್ದೇವೆ. ಅವರ ಮೇಲೆ ಪ್ರಸ್ತಾಪ ಮಾಡುವುದಕ್ಕೆ ಸಾಧ್ಯ ಇದ್ದರೆ ಅವರ ಬಗ್ಗೆ ಚರ್ಚೆ ಮಾಡುವುದಾದರೆ ನನ್ನದೇನೂ ವಿರೋಧ ಇಲ್ಲ. ಒಂದುವೇಳೆ ಅದನ್ನು ಒಪ್ಪಿಕೊಳ್ಳತಕ್ಕಂಥ ಪರಿಸ್ಥಿತಿ ಬಂದರೆ ಸಂಬಂಧಪಟ್ಟವರ ಮೇಲೆ ಕ್ರಮ ತೆಗೆದುಕೊಳ್ಳುವುದಕ್ಕೆ ಹಿಂದು ಮುಂದು ನೋಡುವುದಿಲ್ಲ. ಆದ್ದರಿಂದ ಮಾನ್ಯ ಸದಸ್ಯರು ಮಾತನಾಡುವಾಗ ಮಿತಿಯೊಳಗೆ ಮಾತನಾಡತಕ್ಕಂಥಾದ್ದು ಒಳ್ಳೆಯದು ಎಂಬುದಾಗಿ ನಾನು ತಮ್ಮ ಮುಂದೆ ಹೇಳುವುದಕ್ಕೆ ಇಷ್ಟಪಡುತ್ತೇನೆ. Persons who are not members of the House cannot defend themselves here.

SRI S.R. BOMMAI :-The Managing Director is a Government employee. To the extent they are concerned with the public funds, we are entitled to criticise. If there is an allegation that misappropriation is there, we have got a right to say that there is misappropriation That is our fundamental right. Otherwise the discussion will be futile. Everyday we talk about P.W.D, officers and Police officers. If the Managing Director of the Chairman of Agro-Industries Corporation has misused his powers or even drawn illegal T.A. and D.A. we have a right to say.

SRI K. H. RANGANATH :—For the information of the House, I would like to say that the Chairman has taken office of the Chairman on 23-3-78. I have also given a booklet, and the whole thing is there.

SRI S. R. BOMMAI :—Earliar also he was there

SRI K. H. RANGANATH :—Earlier he was only a Director there. further, the Managing Director is there for the last two years. and 3 months. The accounts are there, and I have not suppressed and facats. I am submitting this only to help the hon. members to speak But It us not say what all we want to say.

ಶ್ರೀ ಪಿ. ರಾಮದೇವ್ :—ಮಾನ್ಯ ಸಂಸದೀಯ ವ್ಯವಹಾರಗಳ ಸಚಿವರು ಹೇಳಿರುವಂತೆ ಇತಿ. ಮಿತಿಯೊಳಗೆ ಮಾತನಾಡಬೇಕೆಂದು ಹೇಳಿರುವುದು ನನಗೆ ಬಹಳ ಸ್ಟ್ರೇಜ್ ಆಗಿ ಕಾಣುತ್ತದೆ.

ಶ್ರೀ ಕೆ. ಪೆಚ್. ರಂಗನಾಥ್.—ಇತಿ-ಮಿತಿಯೊಳಗೆ ಮಾತನಾಡಿ ಎಂಬುದಾಗಿ ಹೇಳಿದ್ದು ನಿಮಗೆ ಸ್ಟ್ರೇಜ್ ಆಗಿ ಕಾಣುತ್ತದೆಯೇ?

ಶ್ರೀ ಪಿ. ರಾಮ್‌ದೇವ್ :—ಹೌದು.

ಶ್ರೀ ಕೆ. ಪೆಚ್. ರಂಗನಾಥ್ :—ನಮ್ಮ ಮೇಲೆ ನಾವೇ ಹಾಕಿಕೊಳ್ಳಂಥ ಒಂದು ರಿಸ್ಟ್ರಿಕ್ಷನ್. ಅದು ನಿಮಗೆ ಸ್ಟ್ರೇಂಜ್ ಆಗಿ ಕಾಣುವುದಾದರೆ ಅದಕ್ಕೆ ನಾನು ಏನು ಮಾಡಲಿ?

ಶ್ರೀ ಪಿ. ರಾಮದೇವ್ :—ಹಣ ದುರುಪಯೋಗ ಮಾಡಿರತಕ್ಕಂಥಾದ್ದರ ಬಗ್ಗೆ ಚಾರ್ಜಸ್ ಇದೆ.

ಶ್ರೀ ಕೆ. ಪೆಚ್. ರಂಗನಾಥ್ :—ಅದರ ನೋಟೀಸ್ ಏನಿದೆ ಅಷ್ಟಕ್ಕೆ ನಾವು ಕನ್‌ಫೈನ್ ಆಗೋಣ. Let us not go beyond the notice.

SRI S. R. BOMMAI :—I will read the Notice.

SRI K. H. RANGANATH :—The Notice isder Rule 312.

SRI S. R. BOMMAI :—I have given the Notice like this.

SRI K. H RANGANATH :—We have to restrict it as put in the Agenda

SRI S. R. BOMMAI :—In the Agenda, they put only the summary.

SRI K. H. RANGANATH :—The Notice is admitted under Rule 312-Agenda is the most important thing. I have been called upon to answer a matter that has been put before the House under Rule 312. What does Rule 312 say?

SRI S R BMOMAI ....When a Notice sent by a Member, a copy of the Notice given to the Minister. But while putting in the Agenda the sumwary of tne subject is given. The Hon'ble Minister has to ans \ the Notice, and details are given in the Notice.

SRI K. H. RANGANATH .—With due respects to the hon. the Leader of the Opposition, may I bring it to his notice that it will be a very serious reflection on the chair to say that you had given something, but something is put in the Agenda?

SRI S. R. BOMMAI.—It is not a reflection on the Chair. The normal practice is that summary of the Notice is given in the Agenda.

SRI K. H. RANGANATH :—We have got various rules. This Notice is put on the Agenda under the Rule 312. What does it say ? It says :—

"A member who wishes to bring to the notice of the Assembly any matter which is not a point of order shall give notice to the Secretary in writing stating briefly the point....."
He might have given Notice under a different rule. When it has been put on the Agenda under Rule 312, he is a party to it; he has accepted it. That is why I said: 'will it not be a sort of reflection on the Chair'.

SRI S. R. BOMMAI.—I am sorry the Hon'ble Minister is misleading the House. I have given Notice.....

SRI K. H. RANGANATH.—I am not in the habit of misleanding things; I am in the habit of putting things straight.

SRI MICHEAL B. FERNANDES.—The Minister is unwittingly misleading !

SRI S. R. BOMMAI. —I can prove that the Minister is misleading. I have given Notice on 17th April 1979 and I have given details in my notice. But the summary is given in the Agenda.

SRI K. H. RANGANATH.—The decision of the Speaker was already there to convert it under Rule 312. When it has been put on Agenda, he has to acceptit. How can the hon. member say that I am misleading the House ?

MADAM DEPPUTY SPEAKER.— It is correct that the hon. member has given notice under Rule 312. The Minister says that he may please keep up to the points under discussion put in the Agenda. Let the hon. member stick on to the points given under Rule 312. Time will be given for discussion on the White Paper that has been given.

ಶ್ರೀ ಪಿ. ರಾಮುದೇವ್.—ಈ ಬಗ್ಗೆ ನಾನು ಇನ್ನು ಹೆಚ್ಚು ಹೇಳುವುದಕ್ಕೆ ಹೋಗುವುದಿಲ್ಲ. ಆದರೆ ಇವರು ಕೊಟ್ಟಿರತಕ್ಕ ವೈಟ್ ಪೇಪರ್‌ನಲ್ಲಿ ಇವರು ಮಾಡಿರತಕ್ಕ ಹೇಳಿಕೆಯನ್ನು ಸಭೆಯ ಗಮನಕ್ಕೆ ತರಬಯಸುತ್ತೇನೆ. ನಷ್ಟ ಆಗುವುದಕ್ಕೆ ಕಾರಣ ಏನು ಎಂದು ಹೇಳುತ್ತಾ ಹೋಟ ನಾಲ್ಕರಲ್ಲಿ ಈ ರೀತಿ ಹೇಳಿದ್ದಾರೆ. The point we seek to make in this Whitepaper is that mismanagement and corruption. Alone is not responsible for the loss. He has agreed that corruption is there ಆದರೆ ನಷ್ಟಕ್ಕೆ ಬೇರೆ ಕಾರಣಗಳು ಇದೆ. ಇದರಲ್ಲಿ ನಷ್ಟವಾಯಿತು ಎಂದು ಕೊಟ್ಟಿದ್ದಾರೆ. ರಾಸಾಯನಿಕ ಗೊಬ್ಬರವನ್ನು ದುಬಾರಿ ಬೆಲೆಯನ್ನು ಕೊಟ್ಟು ಕೊಂಡುಕೊಳ್ಳುವುದರಲ್ಲಿ ೨೫ ಲಕ್ಷ ರೂಪಾಯಿಗಳನ್ನು ನಷ್ಟ ಮಾಡಿಕೊಂಡಿದಾರೆ. ಏತಕ್ಕೆ ಆ ರೀತಿ ದುಬಾರಿ ಬೆಲೆಯನ್ನು ಕೊಟ್ಟಿದ್ದಾರೆ? ಇದರಲ್ಲಿ ನಮಗೆ ಸಂಶಯ ಬಂದಿದೆ. ಇನ್ನು ಎರಡನೆಯದಾಗಿ ಗೊಬ್ಬರವನ್ನು ನೇರವಾಗಿ ಬೆಜೆಂಟರಿಗೆ ನೀಡಿದರೂಸಹ ಗೊಬ್ಬರ ರೈಲ್ವೇಯಾರ್ಡ್‌ಗೆ ಅಥವಾ ಬಂದರಿಗೆ ಸಾಗಿಸಿದ್ದೇವೆ ಎಂದು ಸುಳ್ಳು ಬೇಳಿ ೨೦ ಲಕ್ಷ ರೂಪಾಯಿಗಳನ್ನು ಸುಳ್ಳು ಲೆಕ್ಕ ಕೊಟ್ಟು ಹಣ ಪಡೆದಿದ್ದಾರೆ. ಮ್ಯಾನೇಜಮೆಂಟ್ ಮೇಲೆ ಆರೋಪಣೆ ಇದೆ ಅದನ್ನು ಬೇಕಾದರೆ ಅಮೇಲೆ ಚರ್ಚೆ ಮಾಡೋಣ. ಈಗ ನಾನು ಕೇಳತಕ್ಕದ್ದು ಇಷ್ಟೇ. ಈಗ ತಕ್ಷಣ ಮಂಷ್ಕರ ಹೂಡಿದವರೂಡನೆ ಮಾತುಕತೆ ನಡೆಸಿ ಮುಷ್ಕರವನ್ನು ಕೊನೆಗಾಣಿಸತಕ್ಕ ವಿಚಾರವೆ ಕಡೆಗೆ ತಮ್ಮ ಗಮನವನ್ನು ಹರಿಸಬೇಕು. ಕಾರ್ಮಿಕರ ನ್ಯಾಯಪಾದ ಬೇಡಿಕೆಗಳು ಏನವೆ ಅದನ್ನು ತಮಗೆ ಕೊಟ್ಟಿದ್ದಾರೆ. ಶ್ರೀಮಾನ್ ರಂಗನಾಥ್ ಅವರು ದೊಡ್ಡ ಸಭಾಜವಾದಿಗಳು. ಅವರ ಬಗ್ಗೆ ನನಗೆ ಬಹಳ ಗೌರವವಿದೆ. ಆದರೆ ಬಂದು ವಿಚಾರ, ಕರ್ನಾಟಕ ಆಗ್ರೋ ಇಂಡಸ್ಟ್ರೀಸ್ ಕಾರ್ಪೊರೇಷನ್‌ನಲ್ಲಿ ನಷ್ಟ ಆಗುವುದಕ್ಕೆ ಯಾರು ಕಾರಣರು ಮತ್ತು ಏನು ಕಾರಣ ಎಂದು ಮ್ಯಾನೇಜ್‌ಮೆಂಟಿನವರು ಕೊಟ್ಟ ಕಾರಣಗಳು ಅದು ಬಹಳ ಅಸಮಂಜಸವಾಗಿದೆ. ಹಾಗೂ ಕಾರ್ಮಿಕರು ಕೊಟ್ಟಿರುವ ನ್ಯಾಯಯುತವಾದ ಬೇಡಿಕೆಗಳನ್ನು ಈಡೇರಿಸಿ ಇದನ್ನು ಸರಿಪಡಿಸ ಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

† ಶ್ರೀ ಮಳ್ಳೂರ್ ಆನಂದರಾಮ್.—ನಮಗೆ ಬೆಳಿಗ್ಗೆ ೯—೩೦ ಗಂಟೆಗೆ ಈ ವೈಟ್ ಪೇಪರ್‌ನ್ನು ಸಪ್ಲೈ ಮಾಡಿದರು. ಇದರ ಬಗ್ಗೆ ಕಾರ್ಮಿಕರು ಸಾಕಷ್ಟು ಮಾಹಿತಿಯನ್ನು ಸಪ್ಲೈ ಮಾಡಿದ್ದಾರೆ. ನಾನೂ ಸಂಗ್ರಹ ಮಾಡಿದ್ದೇನೆ. ಸರ್ಕಾರದವರೂ ಮಾಹಿತಿ ಕೊಟ್ಟಿದ್ದಾರೆ. ಇದರಲ್ಲಿ ಸತ್ಯಾಸತ್ಯತೆ ಏನಿದೆ ಅದನ್ನು ವಿಚಾರ ಮಾಡಬೇಕು. ಇದರಲ್ಲಿ ಎರಡು ಬೇಡಿಕೆಗಳು ಇವೆ. ಅವುಗಳನ್ನು ಶ್ರೀಮಾನ್ ರಂಗನಾಥ ಅವರ ಗಮನಕ್ಕೆ ನಾನು ತರುತ್ತೇನೆ. ಆಗ್ರೋ ಇಂಡಸ್ಟ್ರೀಸ್ ಕಾರ್ಪೊರೇಷನ್‌ನಲ್ಲಿ ನಡೆಯುತಕ್ಕ ಅವ್ಯವಹಾರಗಳು ಏನಿದ ಅವು ಚರ್ಚೆಗೆ ಬಂದಾಗ ಅವುಗಳ ಸತ್ಯಾಸತ್ಯತೆ ಗೊತ್ತಾಗುತ್ತದೆ. ಆದರೆ ಕಾರ್ಮಿಕರಿಗೆ ಸಂಬಂಧಪಟ್ಟ ಎಂದು ಪ್ರಶ್ನೆ ಇದೆ. ಇದರ ಬಗ್ಗೆ ಹೊರಗಡೆ ಎಂಟು ದಿವಸಗಳಿಂದ ಸತ್ಯಾಗ್ರಹ ನಡೆಯುತ್ತಿದೆ. ಸುಮಾರು ೨,೫೦೦ ಜನ ಪ್ರಾಂತ್ಯದ ಎಲ್ಲಾ ಭಾಗದಲ್ಲೂ ಸಂಪೂರ್ಣವಾಗಿ ಸತ್ಯಾಗ್ರಹ ಮಾಡಿದ್ದಾರೆ. ಕಾರ್ಮಿಕ ನಾಯಕರಾದ ಶ್ರೀಮಾನ್ ವೆಂಕಟರಾಮ ಅವರೂ ಕೂಡ ೨ ದಿವಸಗಳಿಂದ ಉಪವಾಸ ಸತ್ಯಾಗ್ರಹ ನಡೆಸುತ್ತಿದ್ದಾರೆ. ಇದರಿಂದ ಒಂದು ಗಂಭೀರವಾದ ಪರಿಸ್ಥಿತಿ ನಿರ್ಮಾಣವಾಗಿದೆ. ಆಗ್ರೋ ಇಂಡಸ್ಟ್ರೀಸ್ ಕಾರ್ಪೊರೇಷನ್ ಅವ್ಯವಹಾರಗಳ ಬಗ್ಗೆ ನಂತರ ಚರ್ಚೆ ಮಾಡಿ ಸಂಬಂಧಪಟ್ಟ ಕಾರ್ಮಿಕರ ಸಮಸ್ಯೆ ಯಾವ ರೀತಿ ಇದೆ ಎಂಬುದನ್ನು ವಿಚಾರ ಮಾಡಿ ಸಂಬಂಧಪಟ್ಟ ಕಾರ್ಮಿಕರಿಗೆ ಅವರ ಪಕ್ಯಗಳನ್ನು ಪಾಪಸ್ಸು ಕೊಡುತ್ತೀರಾ! ಈಗ ಕಾರ್ಖಾನೆಗೆ ಬೀಗಮುದ್ರೆ ಹಾಕಿದ್ದಾರೆ. ಅದನ್ನು ತೆಗೆಸಿ ಆ ಕಾರ್ಮಿಕರು ಕೆಲಸ ಮಾಡುವುದಕ್ಕೆ ಅವಕಾಶ ಮಾಡಿಕೊಡುತ್ತೀರಾ? ಟ್ರೇಡ್ ಯೂನಿಯನ್ ರೈಟ್ಸ್ ಏನಿದೆ ಅದನ್ನು ಪಾಪಸ್ಸು ಕೊಡುತ್ತೀರಾ?

ಎರಡನೆಯದಾಗಿ, ಪೇ ಕಮಿಷನ್ನಿನ ಸಂಬಳ ಸಾರಿಗೆಗೆ ಸಂಬಂಧಪಟ್ಟಹಾಗೆ ತುಕೋಳ್‌ಪೇ ಕಮೀಷನ್‌ನ ಸಂಬಳವನ್ನು ಕೊಟ್ಟಿದೆ. ತುಕೋಳ್ ಪೇ ಕಮೀಷನ್ ಅವರು ಏನು ಕೊಟ್ಟಿದ್ದಾರೆ ಅದಕ್ಕೂ ಕಾರ್ಪೊರೇಷನ್ ಅವರು ಸಂಬಳ ಕೊಡುತ್ತಿರುವುದಕ್ಕೂ ವ್ಯತ್ಯಾಸ ಇದೆ. ಇದರ ಬಗ್ಗೆ ತಾವು ಗಮನ ಪರಿಸಿತಾವು ತೀರ್ಮಾನ ತೆಗೆದುಕೊಳ್ಳುತ್ತೀರಾ? ಈ ಸಭೆ ಮುಗಿದ ನಂತರ ಸಂಬಂಧಪಟ್ಟ ಕಾರ್ಮಿಕ ನಾಯಕರನ್ನು ಕರೆಸಿ ಬಿಗಡಾಯಿಸಿರುವ ಪರಿಸ್ಥಿತಿಯನ್ನು ಕೊನೆಗಾಣಿಸುವುದಕ್ಕೆ ಪ್ರಯತ್ನ ಪಡುತ್ತೀರಾ? ಉಪವಾಸ ಸತ್ಯಾಗ್ರಹವನ್ನು ಕೈಗೊಂಡಿರತಕ್ಕ ನಮ್ಮ ನಾಯಕರನ್ನು ಉಳಿಸುತ್ತೀರಾ?

† ಶ್ರೀ ಮೈಕೆಲ್ ಬಿ. ಫೆರ್ನಾಂಡಿಸ್.—ಮಾನ್ಯ ಅಧ್ಯಕ್ಷರೆ, ಕಾರ್ಮಿಕ ಚಳುವಳಿ ನಡೆಯಬೇಕಾದರೆ ಒಂದು ಮುಖ್ಯ ಕಾರಣ ಅಲ್ಲಿನ ಚೇರ್ಮನ್ ಯಾರು ಇದ್ದಾರೆ ಅವರು ಎರಡು ತಿಂಗಳ ಕೆಳಗೆ ದಾವಣಗೆರೆಯಲ್ಲಿ ಒಂದು ಮೀಟಿಂಗ್ ಅಡ್ರಸ್ ಮಾಡುವಾಗ ಕಾರ್ಮಿಕರು ಸರಿಯಾಗಿ ಕೆಲಸ ಮಾಡದಿರುವುದರಿಂದ ಈ ಸಂಸ್ಥೆಯಲ್ಲಿ ನಷ್ಟವಾಗುವ ಸಂಭವ ಬಂದಿದೆ ಇನ್ನು ಎರಡು ತಿಂಗಳಲ್ಲಿ ಈ ಸಂಸ್ಥೆಯನ್ನು ಮುಚ್ಚುವ ಸನ್ನಿವೇಶ ಒದಗಬಹುದು ಎಂದು ಬಹಿರಂಗವಾಗಿ ಹೇಳಿದ್ದಾರೆ. ಇದರಿಂದ ೨,೦೦೦ ಕಾರ್ಮಿಕರೇ ನಿದ್ದಾರೆ ಅವರಿಗೆ ಚಿಂತೆ ಉಂಟಾಗಿದೆ. ಇದರಿಂದಾಗಿ ಅವರು ಜೀವನ ನಡೆಸುವುದು ಕಷ್ಟವಾಗುತ್ತದೆ ಈ ಸಂಸ್ಥೆಯಲ್ಲಿ ಚೇರ್ಮನ್ ಆಗಿರತಕ್ಕವರು ಎನಿದ್ದಾರೆ ಅವರು ಇಲ್ಲಿಯೂ ಚೇರ್ಮನ್ ಆಗಿದ್ದಾರೆ ಹಾಗೂ ಮೈಸೂರು ಟೊಬ್ಯಾಕೋ ಕಂಪೆನಿಯಲ್ಲಿಯೂ ಚೇರ್ಮನ್ ಆಗಿದ್ದಾರೆ. ಅವರಿಗೆ ೨,೦೦೦ ರೂಪಾಯಿ ವರಮಾನ ಈ ಸಂಸ್ಥೆಯಲ್ಲೂ ಇದೆ. ಅದರೆ ಕಾರ್ಮಿಕರು ಬಹಳ ತೊಂದರೆಯಲ್ಲಿದಾರೆ. ಚೇರ್ಮನ್ ಅವರು ಒಂದೊಂದು ಸಂಸ್ಥೆಯಲ್ಲಿಯೂ ೨,೦೦೦ ರೂಪಾಯಿ ಸಂಬಳ ಕಾರ್ ಅಲೋಯನ್ಸ್, ಇತರೇ ಭತ್ಯಗಳು ತೆಗೆದುಕೊಳ್ಳುತ್ತಿದ್ದಾರೆ. ಆದರೆ ಈ ಕಾರ್ಖಾನೆಯಲ್ಲಿ ಇರತಕ್ಕ ಕಾರ್ಮಿಕರು ಏನಿದ್ದಾರೆ ಅವರು ಭಯದಲ್ಲಿದ್ದಾರೆ; ತೊಂದರೆಯಲ್ಲಿದ್ದಾರೆ. ಈ ರೀತಿ ಇರುವಾಗ ಆ ಕಾರ್ಮಿಕರ ಮೇಲೆ ಒಂದು ಆಪಾದನೆಯನ್ನು ಮಾಡಿದ್ದಾರೆ. ಈ ಪಬ್ಲಿಕ್ ಸೆಕ್ಟಾರ್‌ನಲ್ಲಿರತಕ್ಕ ಒಂದು ಸಂಸ್ಥೆಯಲ್ಲಿ ಸುಲಭವಾಗಿ ಎರಡು ವರ್ಷಗಳಲ್ಲಿ ಹಣ ನುಂಗಿದ್ದಾರೆ. ಅದನ್ನು ನಾನು ಹೇಳುವುದಾದರೆ ಚೇರ್ಮನ್ ಅವರು ಈ ವರ್ಷ ಫೆಬ್ರುವರಿ ೧೬ನೇತಾರೀಖಿ ಅತಿಥಿಗಳ ಖರ್ಚಿಗೋಸ್ಕರ ೧,೧೧೮ ರೂಪಾಯಿಗಳನ್ನು ಏರ್ಪಾ ಮಾಡಿದ್ದಾರೆ. ಈ ಹಣವನ್ನು ಪಡೆಯಲು ಕಾಗದದಲ್ಲಿ ಒಂದು ಸಾಲು ಎಕ್ಸ್‌ಪೆಂಡೀಚರ್ ಪಾರ್ ದಿಗೆಸ್ಟ್ಸ್ ಎಂದು ಬರೆದು ಮ್ಯಾನೇಜಿಂಗ್ ಡೈರೆಕ್ಟರ್ ಅವರಿಗೆ ಬರೆದು ತರಿಸಿಕೊಂಡಿದ್ದಾರೆ. ಈ ದುಡ್ಡನ್ನು ರೀಇಂಬರ್ಸ್‌ಮೆಂಟ್ ಮಾಡುವುದಕ್ಕೆ ಮ್ಯಾನೇಜಿಂಗ್ ಡೈರೆಕ್ಟರ್ ಅವರು ಒಂದು ಆಜ್ಞೆಯನ್ನು ಮಾಡಿದ್ದಾರೆ. ಇಷ್ಟು ಹಣ ಏರ್ಪು ಮಾಡಬೇಕಾದರೆ ಎಂತಹ ಅತಿಥಿಗಳು ಅಲ್ಲಿಗೆ ಬಂದಿದ್ದರು. ಅದರಿಂದ ಯಾರಿಗೆ ಲಾಭವಾಯಿತು ಎಬುದು ಗೊತ್ತಿಲ್ಲ. ಹಣದುರುಪಯೋಗದ ಬಗ್ಗೆ ಪರಿಶೀಲಿಸಿದಾಗ ಅವರು ಹೇಳಿದರು ಈ ಸಂಸ್ಥೆಯ ನೌಕರರು ಸರಿಯಾಗಿ ಕೆಲಸವನ್ನು ನಿರ್ವಹಿಸಿಲ್ಲ ಎಂದು ಆಪಾದಿಸಿದ ಕಾರ್ಪೊರೇಷನ್ ಅಧ್ಯಕ್ಷರು, ಸಂಸ್ಥೆಗೆ ಆಗಿರುವ ನಷ್ಟದ ಬಗ್ಗೆ ಪ್ರಸ್ತಾಪಿಸಿ ಸಾರ್ವಜನಿಕರ ಹಣವನ್ನು ಯಾರು ಬೇಕಾದರೂ ಸುಲಭವಾಗಿ ನುಂಗಿಹಾಕಬಹುದು ಎಂಬುದಕ್ಕೆ ಇದು ಸ್ಪಷ್ಟವಾದ ಉದಾಹರಣೆ ಎಂದರು. This is the moral question before the workers. ಅವರು ಒಂದು ಗಹನವಾದ ರೀತಿಯಲ್ಲಿ ಕಾಣುವಂತೆ ಅವರ ಒಂದು ರಾಜಕಾರಣವಾದ ನೀತಿಯ ಪ್ರಭಾವವನ್ನು ಉಪಯೋಗಿಸಿಕೊಂಡು ಬೇಜವಾಬ್ದಾರಿಯಿಂದ ಮಾತನಾಡಿದರೆ ಕಾರ್ಮಿಕರು ಯಾವ ರೀತಿ ಇರಬೇಕು. ಇದೇ ಕಾರ್ಮಿಕರು ಚಳುವಳಿ ಹೂಡುವುದಕ್ಕೆ ಮುಖ್ಯ ಕಾರಣ. ಯಾವ ರೀತಿ ಅವರು ವರ್ತಿಸಿ ಕಾರ್ಮಿಕರ ಮೇಲೆ ಬೆದರಿಕೆಯನ್ನು ಹಾಕಿದ್ದಾರೆ ಅದೂ ಒಂದು ಕಾರಣ ಕಾರ್ಮಿಕರು ಚಳುವಳಿ ಮಾಡುವುದಕ್ಕೆ. ಯೂನಿಯನ್ ಡಿರೆಕಗನೈಸ್ ಮಾಡಿ ಆದಕ್ಕೆ ಬೀಗ ಹಾಕಿದ್ದಾರೆ. ಯೂನಿಯನ್ ಆಫೀಸಿನಿಂದ ಪೇಪರ್‌ಗಳನ್ನು ಹೊರಗಡೆ ತೆಗೆದುಕೊಂಡು ಬರುವುದಕ್ಕೂ ಅವಕಾಶವಿಲ್ಲ. ಯೂನಿಯನ್ ಆಫೀಸಿನ ಹತ್ತಿರ ಆಫೀಸರುಗಳು ಓಡಾಡುತ್ತಿದ್ದಾರೆ. ಇಂಥ ಒಂದು ಸನ್ನಿವೇಶದಲ್ಲಿ ಕಾರ್ಮಿಕರ ಉಪವಾಸ ಮುಷ್ಕರ ಹೂಡಿದ್ದಾರೆ. ಇಡೀ ರಾಜ್ಯದಲ್ಲೇ ಈ ಮುಷ್ಕರವನ್ನು ಪ್ರಾರಂಭಮಾಡಿದ್ದಾರೆ. ಈ ಯೂನಿಯನ್ನಿನ ಅಧ್ಯಕ್ಷರಾದ ಶ್ರೀ ಎಸ್. ವೆಂಕಟರಾಮ್ ಅವರೂ ಕೂಡ ನಾಲ್ಕು ದಿವಸಗಳಿಂದ ಉಪವಾಸ ಮುಷ್ಕರ ಹೂಡಿದ್ದಾರೆ. ಆದ್ದರಿಂದ ಮಾನ್ಯ ಮಂತ್ರಿಗಳು ಇದರ ಬಗ್ಗೆ ಸೂಕ್ಷ್ಮ ಕ್ರಮ ತೆಗೆದುಕೊಂಡು ಉಪವಾಸ ಮುಷ್ಕರವನ್ನು ಕೊನೆಗಾಣಿಸಬೇಕು. ಈ ಸಂಸ್ಥೆಯಲ್ಲಿ ಆಗಿರತಕ್ಕಂತಹ ಮಿಸ್‌ಮ್ಯಾನೇಜ್‌ಮೆಂಟ್, ಮಿಸ್ ಅಪ್ರೊಪ್ರಿಯೇಷನ್ ಇವುಗಳನ್ನು ವೈಟ್ ಪೇಪರ್‌ನಲ್ಲಿ ನೋಡಬೇಕಾಗುತ್ತದೆ. There is no white on the paper, not even the matter which is printed is white. Everything is white on the paper only. ಆದ್ದರಿದ ಈ ಒಂದು ವಿಚಾರದಲ್ಲಿ ಮಾನ್ಯಮಂತ್ರಿಗಳು ಕಾರ್ಮಿಕರಿಗೆ ಧೈರ್ಯಸಿಕ್ಕುವ ರೀತಿಯಲ್ಲಿ, ನ್ಯಾಯ ಸಿಕ್ಕುವ ರೀತಿಯಲ್ಲಿ ಚೇರ್ಮನ್ ಯಾರೇ ಇರಲಿ, ಅವರು ಎಷ್ಟೇ ಪ್ರಭಾವ ಉಳ್ಳವರಾಗಿರಲಿ, ನ್ಯಾಯ ಮತ್ತು ಸತ್ಯ ರೀತಿಯಲ್ಲಿ ಅವರು ನಡೆಯಲಿಲ್ಲ ಎಂದರೆ ಅವರನ್ನು ಅಧಿಕಾರದಿಂದ ತೆಗೆ ಯುವ ಹಾಗೆ ಮತ್ತು ಸಂಸ್ಥೆ ಉಳಿಯುವ ಹಾಗೆ ಭರವಸೆ ಕೊಡಬೇಕು. ಅದೇ ರೀತಿ ಉಪವಾಸ ಮುಷ್ಕರ ನಿಲ್ಲಿಸುವುದಕ್ಕೆ ಯಾವ ಕ್ರಮವನ್ನು ತೆಗೆದುಕೊಳ್ಳಬೇಕೋ ಅದನ್ನು ತೆಗೆದುಕೊಳ್ಳಬೇಕು.

ಶ್ರೀ ಕೆ. ಎಚ್. ರಂಗನಾಥ್.—ಸನ್ಮಾನ್ಯ ಅಧ್ಯಕ್ಷರೆ, ಹಿಂದಿನೇ ರೂಲ್ ಕೆಳಗೆ ಮಾನ್ಯಸಂ ಸ್ಯರು ಏನು ನೋಟೀಸ್ ಕೊಟ್ಟಿದ್ದಾರೆ ಅದಕ್ಕೆ ಮಾತ್ರ ನಾನು ಸೀಮಿತವಾಗಿ ಹೇಳಿಕೆ ಕೊಟ್ಟು ಬಾಕಿ ವಿಚಾರವನ್ನು ಇನ್ನಿ ಪ್ರಸ್ತಾಪ ಮಾಡತಕ್ಕದ್ದು ಅಷ್ಟು ಸಮಂಜಸವಲ್ಲವೆಂದು ನಾನು ಭಾವಿಸದ ತ್ತೇನೆ. ಮಾನ್ಯ ಸದಸ್ಯರು ಕೆಲವಾರು ವಿಚಾರಗಳನ್ನು ಹೇಳಿದ್ದಾರೆ. ಅದರ ಬಗ್ಗೆ ಒಂದೆರಡು ಮಾತುಗಳನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ.

11.30 A.M

Sri K. H. RANGANATH.—(Minister for Agriculture and Parliamentary Affairs)

Some Hon'ble members have raised the matter concerning alleged misappropriation amounting to Rs. 5 crores in the Karnataka Agro Industries Corporation. It has been mentioned that this is due to mismanagement and corruption and that it has resulted in miscarriage of justice and has amounted defraud of Government money by the Corporation authorities.

Only a few days ago in connection with a supplementary question relating to the L.A. question laid by Sri Arakeri, I have given certain detailes concerning the Agro Industries Coroporation. I had then made it clear that the Corporation had sustained/heavy loses over a long period and that I was looking into the detailed reasons for such lossess. While sharing the anxiety of the Hon'ble members regarding the state of affairs of this Corporation, I should like to deny emphatically that there has been misapprrpriation to the extent of Rs, 5 crores. The fact is that the Corporation has sustained a loss to the extent of little over Rs. 4 crores. As far as Government have examined this matter, these loses have been due to various reasons over some of which the corporation has no control. Shortly, I will be presenting to the House detailed account of the working of the Corporation in which I would also indicate the particulars of losses, reasons and so on.

Just as in the case of any organisation of the size of the Agro Industries Corporation there is bound to be scope for mismanagement and also perhaps corrouption. It would indeed be an exaggeration of the highest order to say that the entirse Corporation has been mismanaged or that corruption is rampant. The Corporation authorities have been taking timely action to set right such deficiencies as and when noticed. Infact, wherever misappropriation have been noticed, either in the course of Audit or as revealed by inspections, prompt action has been taken against those found responsible. As it is, the Corporation has either terminated the services of certain employees or dismissed some employees in respect of misappropriation amoun ing to Rs. 12.5 lakhs. This will show that the Corporation authorities

are alive to the problems and deficiencies and are taking action wherever necessary. It is not however correct or proper to make statements that there has been total mismanagement or that there has been rampant corruption without substantiating such charges with facts and figures. I assure the Hon'ble member that if specific instances of mismanagement, misappropriation or corruption are brought to the notice of Government immediate action will be taken against those responsible or those found guilty.

Some of the members have also brought to my attention the hunger strike by the President of the employees association. This strike has been started without following any provisions of laws governing trade union activities. There has not even been a proper notice of the intention of strike by the Association to the Management. I have also heard that the President of the Association has started a hunger strike. I understand that a procenssion was also taken out some time ago. Hon'ble members will agree with me that even in matters such as ventilation of grievances of employees a certain code of conduct has to be followed. The demands now thought of by the employees would have been looked into by the Management if properly presented. Holding the authorities to ransom by taking recourse to unprovoked strike and agitation will not be appropriate. I do hope that wiser counsel will prevail with the Association representatives and they would adopt accepted principles and practices in their bringing to the notice of the management such aspects as the association wishes to present.

ಮಾನ್ಯ ಸದಸ್ಯರು ಈ ಅಧ್ಯಕ್ಷರ ಬಗ್ಗೆ ಬಂದು ಮಾತು ಹೇಳಿದರು ಅದೇನೆಂದರೆ ಅವರು ಅಲ್ಲೂ ಇಲ್ಲೂ ಎರಡೊಕಡೆ ಕೆಲಸ ಮಾಡುತ್ತಾ ಇರುವುದರಿಂದ ಒಂದೊಂದು ಕಡೆಯಿಂದ ೨-೨ ಸಾವಿರ ರೂಪಾಯಿ ಸಂಬಳವನ್ನು ತೆಗೆದ ಕೊಳ್ಳುತ್ತಾರೆ ಅನ್ನುವ ಮಾತನ್ನು ಹೇಳಿದರು. ಇದು ವಾಸ್ತವಿಕವಾದ ಅಂಶಕ್ಕೆ ಬಹಳದೂರ ಎಂದು ಹೇಳುತ್ತೇನೆ. ಅವರು ಆಗ್ರೋ ಇಂಡಸ್ಟ್ರೀಸ್ ಕಾರ್ಪೋರೇಷನ್ನಲ್ಲಿ ೧೦೦ಕ್ಕೆ ೭೫ ರಷ್ಟು ಸಂಭಾವನೆ ತೆಗೆದುಕೊಳ್ಳುತ್ತಾರೆ, ಇನ್ನುಳಿದ ೨೫ ಪರ್ಸೆಂಟ್ ಸಂಬಳವನ್ನು ಬೊಮ್ಮಾಕೋ ಕಂಪನಿಯಿಂದ ಪಡೆಯುತ್ತಾರೆ. ಆದುದರಿಂದ ಮಾನ್ಯ ಸದಸ್ಯರು ಈ ಬಗ್ಗೆ ಹೇಳಿದ್ದು ಸತ್ಯಕ್ಕೆ ದೂರವಾದ ಮಾತು ಎಂಬು ಹೇಳಲಿಕ್ಕೆ ಬಯಸುತ್ತೇನೆ. ಇನ್ನು ಯೂನಿಯನ್‌ಅನ್ನು ಡಿರಿಕಗ್ನಿಷನ್ ಬಗ್ಗೆ ಹೇಳಿದರು. ಇದು ಲೇಬರ್ ಡಿಪಾರ್ಟ್‌ಮೆಂಟಿಗೆ ಸಂಬಂಧಪಟ್ಟದ್ದಾದ್ದರಿಂದ ಅದನ್ನು ಏನು ಮಾಡುತ್ತಾರೋ ಅನ್ನುವುದನ್ನು ವಿಚಾರ ಮಾಡೋಣ ಇನ್ನೊಂದು ವಿಷಯ ಏನೆಂದರೆ ಶ್ರೀ ಆಲಂಪಳ್ಳಿ ವೆಂಕಟರಾಂರವರು ೨-೪-೧೯೭೯ ರಲ್ಲಿ ೨ನೇ ಸಾರಿ ಒಂದು ಪತ್ರ ಬರೆದರು. ಅದು ಟೈಪ್ ಆಗಿದೆ ಇದರ ಜೊತೆಗೆ ೧೨ನೇ ತಾರೀಖು ಶ್ರೀ ವೈ.ಎಸ್. ಪಾಟೀಲ್‌ರವರ ಜೊತೆಯಲ್ಲಿ ನನ್ನ ಮನೆಗೆ ಬಂದು ಪತ್ರ ಕೊಟ್ಟರು. ಆದರಲ್ಲಿ ಈ ವಿಚಾರದ ಬಗ್ಗೆ ಏನೂ ಹೇಳಲಿಲ್ಲಾ ಅವರು ನಾವು ಉಪವಾಸ ಸತ್ಯಾಗ್ರಹ ಮಾಡುತ್ತೇವೆ ಎಂದು ಏನೂ ಹೇಳಿಲ್ಲಾ. ಮತ್ತು ಯಾವ ಡಿಮಾಂಡ್‌ಗೋಸ್ಕರ ನಾವು ಉಪವಾಸ ಸತ್ಯಾಗ್ರಹ ಮಾಡುತ್ತೇವೆ ಅನ್ನುವುದನ್ನೂ ಸಹ ಹೇಳಲಿಲ್ಲಾ. ಈ ಬಗ್ಗೆ ನಾನು ತಮಗೆ ಎನು ಹೇಳಿದ್ದೇನೆ ಅದರ ಬಗ್ಗೆ ಕೆಲವು ವಿಚಾರಗಳನ್ನು ಅವರು ಪ್ರಸ್ತಾಪ ಮಾಡಿದ್ದಾರೆ. ಯಾವ ವಿಚಾರ ಪ್ರಸ್ತಾಪ ಮಾಡಿದ್ದಾರೆ ಎಂದರೆ ಇದರಲ್ಲಿ ಅನ್ಯಾಯವಾಗಿದೆ ಎಂದು ಪ್ರಸ್ತಾಪ ಮಾಡಿದ್ದಾರೆ ಮತ್ತು ಇದುಲ್ಲಿ ತುಂಬಾ ನಷ್ಟವಾಗಿದೆ ಎನ್ನುವ ಬಗ್ಗೆ ಮತ್ತು ಇನ್ನು ಕಲವುದುಲ್ಲಿ ಮಿಸ್‌ಅಪ್ರೋಪ್ರಿಯೇಷನ್ ಆಗಿದೆ ಎನ್ನುವ ಬಗ್ಗೆ ಪ್ರಸ್ತಾಪ ಮಾಡಿದಾರೆ. ಸುಮಾರು ಅವುಗಳು ೨೦ ಪುಟದಷ್ಟಿವೆ ಆಮೇಲೆ

ನಮ್ಮ ಮನೆಗೆ ಬಂದಿದ್ದಾರೆ ಅವರು ಉಪವಾಸ ಸತ್ಯಾಗ್ರಹ ಮಾಡುತ್ತೇವೆ ಅನ್ನುವುದನ್ನು ಹೇಳಲಿಲ್ಲ ಅಥವಾ ಇದರ ಬಗ್ಗೆ ಸರ್ಕಾರಕ್ಕೆ ಯಾವ ಒಂದು ನೋಟೀಸ್ ಸಹ ಕೊಟ್ಟಿಲ್ಲಾ. ಈಗ ತಾವು ನನ್ನ ಗಮನಕ್ಕೆ ತೆಗೆದುಕೊಂಡು ಬಂದಿದ್ದೀರಿ ಆದುದರಿಂದ ಈಗ ಇದರ ಬಗ್ಗೆ ಮಾನ್ಯ ಸದಸ್ಯರು ಹೇಳಿದ ರೀತಿಯಲ್ಲಿ ಅವರ ಜೊತೆಯಲ್ಲಿ ನಾನು ಮಾತನಾಡಿ ಅವರನ್ನು ತಮ್ಮ ಉಪವಾಸ ಸತ್ಯಾಗ್ರಹವನ್ನು ಬಿಡಿ ಎಂದು ಹೇಳತಕ್ಕಂಥಾದ್ದು ಯೋಗ್ಯವಾದ ಕ್ರಮ ಅಲ್ಲ ಎಂದು ನಾನು ತಿಳಿದು ಕೊಂಡಿದ್ದೇನೆ.

ಶ್ರೀ ಎಸ್.ಆರ್. ಬೊಮ್ಮಾಯಿ :—ನಾವು ಹಾಗೆ ಹೇಳಲಿಲ್ಲಾ, ಅವರನ್ನು ನಿಮ್ಮ ಹತ್ತಿರವೇ ಕರೆಸಿಕೊಳ್ಳಿ ಎಂದು ಹೇಳಿದ್ದು.

ಶ್ರೀ ಕೆ.ಹೆಚ್. ರಂಗನಾಥ್.— ಮೊನ್ನೆ ಪ್ರಶ್ನೋತ್ತರ ಸಮಯ ಬಂದಾಗ ಈ ಆಗ್ರೋ ಇಂಡಸ್ಟ್ರೀಸ್ ಕಾರ್ಪೊರೇಷನ್ನಿನಲ್ಲಿ ಬಹಳ ನಷ್ಟವಾಗಿದೆ ಇದನ್ನು ಪ್ರೋಬ್ ಮಾಡಿ ಎಂದು ಮಾನ್ಯ ಸದಸ್ಯರು ಹೇಳಿದರು. ಅದನ್ನು ಮಾಡಲಿಕ್ಕೆ ನಾನು ತಯಾರಿದ್ದೇನೆ ಎಂದು ಹೇಳಿದೆ. ಆದರೆ ಇದಕ್ಕೋಸ್ಕರವಾಗಿಯೇನೇ ಅಲ್ಲಿನ ನೌಕರರು ತಮ್ಮ ಕೆಲಸ ಬಿಟ್ಟು ಉಪವಾಸ ಸತ್ಯಾಗ್ರಹ ಮಾಡುವುದಾಗಲಿ ಅಥವಾ ಸ್ಟ್ರೈಕ್‌ಗಗೈರೆ ಮಾಡುವುದಾಗಲಿ ಮಾಡಿದರೆ ಇದು ಸರಿಯೇ ಎಂದು ನಾನು ಮಾನ್ಯ ಸದಸ್ಯರಾದ ಶ್ರೀ ಮೈಕಲ್ ಫರ್ನಾಂಡಿಸ್‌ರವರನ್ನು ಕೇಳುತ್ತೇನೆ. ಮಾನ್ಯ ಸದಸ್ಯರು ಟ್ರೇಡ್‌ಯೂನಿಯನ್‌ನಲ್ಲಿ ಇದ್ದವರು, ಅವರು ಐ.ಟಿ.ಐ.ನಲ್ಲಿ ಸೆಕ್ರೆಟರಿಯಾಗಿ ಕೆಲಸ ಮಾಡಿದ್ದಾರೆ ಮೇಲಾಗಿ ಅವರು ಅದೇ ಕಾರ್ಖಾನೆಯಲ್ಲಿ ಕಾರ್ಮಿಕರಾಗಿಯೂ ಕೆಲಸ ಮಾಡಿದ್ದಾರೆ. ಅವರಿಗೆ ಈ ವಿಚಾರ ಚನ್ನಾಗಿ ಗೊತ್ತಿದೆ. ಅವರು ನನಗೇನೂ ಹೊಸಬರಲ್ಲ, ಹಳಬರೇ. ಏನಾದರೂ ಡಿಮ್ಯಾಂಡ್ಸ್‌ಗಳು ಇದ್ದರೆ ಅದನ್ನು ಪೂರೈಸಿಕೊಡಬೇಕು ಎಂದು ಮೊದಲು ಮ್ಯಾನೇಜ್‌ಮೆಂಟಿಗೆ ಹೇಳಬೇಕು ಅವರು ಅದನ್ನು ಮಾಡದೇ ಹೋದರೆ ನಂತರ ಸರ್ಕಾರದವರು ಏನು ತೀರ್ಮಾನ ತೆಗೆದುಕೊಳ್ಳಬೇಕೋ ಆದನ್ನು ತೆಗೆದುಕೊಳ್ಳುತ್ತಾರೆ. ನನಗೆ ಮೊದಲನೇ ಪತ್ರ ಬಂದಿದ್ದರಲ್ಲಿ ಅಲ್ಲಿರತಕ್ಕಂಥಾ ಅಧಿಕಾರಿಗಳನ್ನು ಟ್ರಾನ್ಸ್‌ಫರ್ ಮಾಡಬೇಕೆನ್ನುವುದು. ನಂತರ ಆಲಂಪಳ್ಳಿ ವೆಂಕಟರಾಂರವರು ಏನು ಬರೆದಿದ್ದಾರೆ ಎಂದರೆ ೧೯೭೪–೭೫ ರಲ್ಲಿ ಮತ್ತು ೧೯೭೫–೭೬ರಲ್ಲಿ ಇದರಲ್ಲಿ ಬಹಳ ಅನ್ಯಾಯವಾಗಿದೆ ಎಂದು ಬರೆದಿದ್ದಾರೆ. ಆದಕ್ಕೆ ನಾನಂ ಕೇಳುತ್ತೇನೆ ಇದನ್ನು ಅವರು ನೋಡಿದಾಗ ಕಾರ್ಮಿಕ ಸಂಘದ ಅಧ್ಯಕ್ಷರು ಆಗಲಿ ಅಥವಾ ಈಗ ಇರತಕ್ಕಂಥಾ ಮ್ಯಾನೇಜ್‌ಮೆಂಟ್ ಆಗಲಿ ಆವಾಗ ಏತಕ್ಕೆ ಸರ್ಕಾರದ ಗಮನಕ್ಕೆ ಈ ವಿಷಯವನ್ನು ತರಲಿಲ್ಲಾ ಎಂದು ಬರೆದಿದ್ದೇನೆ ಮತ್ತು ಇನ್ನು ಅಧಿಕಾರಿಗಳ ಟ್ರಾನ್ಸ್‌ಫರ್ ಬಗ್ಗೆ ಪತ್ರ ಬರೆದಿದ್ದಾರೆ. ಅವರು ಈ ವರ್ಗದ ಬಗ್ಗೆ ಪ್ರಸ್ತಾಪ ಮಾಡುವುದು ಸರಿಯಲ್ಲ ಏತಕ್ಕೆಂದರೆ ಅದರಲ್ಲಿ ಯಾರು ಇರಬೇಕು ಮತ್ತು ಅಲ್ಲಿ ಯಾರನ್ನು ಬಿಡಬೇಕು ಅನ್ನುವ ವಿಚಾರ ಅವರವರ ಇಂಟರ್‌ನಲ್ ವಿಚಾರ. ಅದು ಅವರಿಗೆ ಸಂಬಂಧಪಟ್ಟಿದ್ದಾಗಿರುತ್ತದೆ. ಆದುದರಿಂದ ಅವರನ್ನು ವರ್ಗ ಮಾಡಿ ಎಂದು ಹೇಳುವುದು ಸರಿಯಲ್ಲ ನಾನು ಈ ವಿಚಾರವಾಗಿ ಅವರಿಗೆ ಮರುದಿನವೇ ಪತ್ರ ಬರೆದೆ. ಅವರು ಬರೆದಿರುವ ಪತ್ರದ ಬಗ್ಗೆ ಉಪವಾಸ ಸತ್ಯಾಗ್ರಹ ಮಾಡುವುದಾಗಲಿ ಅಥವಾ ಸ್ಟ್ರೈಕ್ ಮಾಡುವುದಾಗಲಿ ಅಥವಾ ಈ ಬಗ್ಗೆ ಯಾವುದೇ ವಿಚಾರವಾಗಲಿ ನನ್ನ ಗಮನಕ್ಕೆ ಬಂದಿಲ್ಲಾ. ನಂತರ ನನ್ನದು ವೈಟ್ ಅಲ್ಲ ಕಂದುಬಣ್ಣ ಎಂದು ಹೇಳಿದರು. ನಾನು ಹೇಳಬೇಕಾದರೆ ಆದು ಕಂದುಬಣ್ಣ ಅಲ್ಲ ನಸುಹಸರು ಬಣ್ಣ ಎಂದು ಹೇಳುತ್ತೇನೆ.

ಇನ್ನು ಮಾನ್ಯ ಸದಸ್ಯರುಗಳು ಮೇ ಕಮಿಷನ್ ಬಗ್ಗೆ ಪ್ರಸ್ತಾಪಮಾಡಿದ್ದಾರೆ. ಮೊನ್ನೆ ಕಾನೇ ಪೈ ಕಮಿಷನ್‌ನ ಸಂಬಳಗಳನ್ನು ನಾವು ಅವರಿಗೆ ಕೊಟ್ಟಿದ್ದೇವೆ. ನಾನು ಈ ವಿಷಯಗಳ ಬಗ್ಗೆ ವಿಷದವಾದ ಚರ್ಚೆಯನ್ನು ಮಾಡುವುದಕ್ಕೆ ತಯಾರಿದ್ದೇನೆ. ನನ್ನಲ್ಲಿಯೂ ಕೂಡ ಈ ಸಂಸ್ಥೆಯು ಲಾಭದಾಯಕವಾಗಿ ನಡೆಯಬೇಕು ಎನ್ನುವ ಕಳಕಳಿ ಇದೆ. ಇದು ರೈತರಿಗೆ ಅನುಕೂಲವಾಗುವ ರೀತಿಯಲ್ಲಿ ನಡೆಯಬೇಕು ಎಂದು ಇದೆ. ಇದರ ಪ್ರಮುಖವಾದದ್ದು. ನೌಕರರ ಸಂಬಳ ಸಾರಿಗೆಗಳು ಮತ್ತು ಅವರಿಗೆ ಅನುಕೂಲತೆಗಳನ್ನು ಕೊಡುವುದು ಎರಡನೆಯ ಸ್ಥಾನವನ್ನು ಹೊಂದುತ್ತದೆ ಈಗಾಗಲೇ ಹಾಸನ ಮತ್ತು ಮೈಸೂರು ಜಿಲ್ಲೆಗಳಲ್ಲಿ ಮಳೆಯಾಗಿದೆ, ಆಗ್ರೋ ಕೇಂದ್ರಗಳ ಮೂಲಕ ಗೊಬ್ಬರ ಹಾಗೂ ಬೀಜಗಳ ಮಾರಾಟವಾಗಬೇಕು. ಅದರ ನೌಕರುಗಳು ಇಲ್ಲಿ ಮುಷ್ಕರ ಕೂತಿರುವಾಗ ನಾವು ಯಾರ ಮುಖಾಂತರ ಮಾರಾಟ ಮಾಡಬೇಕು ? ಹೇಗೆ ಮಾರಾಟಮಾಡಬೇಕು ? ಇದರಿಂದ ರಾಜ್ಯದ ಉತ್ಪಾದನೆಯ ಮೇಲೆ ಹೆಚ್ಚಿನ ಪರಿಣಾಮವಾಗುವುದಿಲ್ಲವೇ ? ಇದನ್ನು ಕೂಡ ನಾವೆಲ್ಲರೂ ವಿಚಾರ ಮಾಡಬೇಕು. ನೌಕರರು ನಮಗೆ ತಿಳಿಸದೆ ಈ ರೀತಿಯ ಮುಷ್ಕರವನ್ನು ಮಾಡತಕ್ಕದ್ದು ಸರಿಯಾದ ಕಾರ್ಯಕ್ರಮವಲ್ಲ. ಆದರೂ

ನಾನು ಅವರ ಬಗ್ಗೆ ಪ್ರಜುಡೂಸ್ ವ್ಯೂ ಇಟ್ಟುಕೊಂಡಿದ್ದೇನೆಂದು ಯಾರೂ ಭಾವಿಸಬಾರದು. ಪೈ ಕಮಿಷನ್‌ನ ಮೇ ಅವರಿಗೆ ಮೊನ್ನೆ ಕೊಟ್ಟಿರುವುದರಿಂದ ಪ್ರಶ್ನೆ : ಈ ವಿಚಾರವನ್ನು ಪರಿಶೀಲಿಸುವುದಕ್ಕೆ ಸಾಧ್ಯವಾಗುವುದಿಲ್ಲ. ಈಗಾಗಲೇ ನಾನು ಹೇಳಿದ್ದೇನೆ, ಇದರ ಚೇರ್ಮನ್ನರು ೨೦-೩-೧೯೭೮ ರಂದು ಅಧಿಕಾರ ವಹಿಸಿಕೊಂಡಿದ್ದು ಎಂದು ನಷ್ಟವಾಗಿರತಕ್ಕದ್ದು ಕಳೆದ ಮೂರು ವರ್ಷಗಳಲ್ಲಿ. ಒಂದು ವರ್ಷದಲ್ಲಿ ೯೫ ಲಕ್ಷ ರೂಪಾಯಿಗಳು, ಫರ್ಟಿಲೈಸರ್ಸ್ ರೇಟನ್ನು ಜಾಸ್ತಿ ಮಾಡಿದ್ದರಿಂದ ನಮಗೆ ಲಾಭ ಬಂದಿದೆ. ಕೇಂದ್ರ ಸರ್ಕಾರದವರು ಎಕ್ಸೈಸ್ ಡ್ಯೂಟಿಯನ್ನು ಫರ್ಟಿಲೈಸರ್ಸ್ ಮೇಲೇ ೫೦ ಪರ್ಸೆಂಟ್ ಕಡಿಮೆ ಮಾಡಿದ್ದಾರೆ. ಈಗ ಆಗ್ರೋ ಇಂಡಸ್ಟ್ರೀಸ್ ಕಾರ್ಪೊರೇಷನ್‌ನಲ್ಲಿ ಐದುಕೋಟಿ ರೂಪಾಯಿಗಳ ಫರ್ಟಿಲೈಸರ್ ಸ್ಟಾಕ್ ಇದೆ. ೩೬೫ ದಿವಸಗಳವರೆಗೆ ನಾವು ಸ್ಟಾಕನ್ನು ಇಟ್ಟು ಕೊಳ್ಳಬೇಕಾಗುತ್ತದೆ. ಪ್ರೈವೇಟ್ ಡೀಲರ್ಸ್ ಆದರೆ, ಅವರು ತಮಗೆ ಯಾವಾಗ ಬೇಕೋ ಆಗ ತರಬಹುದು ಬೇಡವಾದಾಗ ಬಿಡಬಹುದು. ಆದರೆ ನಾವು ರೈತರಿಗೆ ಫರ್ಟಿಲೈಸರ್ಸ್ ಕೊಡುವುದು ನಮ್ಮ ಕರ್ತವ್ಯ ಎಂದು ಸ್ಟಾಕ್ ಇಡುವ ಕೆಲಸವನ್ನು ನಾವು ಮಾಡಬೇಕಾಗುತ್ತದೆ. ಈಗ ಕೇಂದ್ರದವರು ಎಕ್ಸೈಸ್ ಡ್ಯೂಟಿಯನ್ನು ಕಡಿಮೆ ಮಾಡಿರುವುದರಿಂದ ಅರ್ಧದಷ್ಟು ಇದರ ಬೆಲೆ ಕಡಿಮೆಯಾಗಿ ನಮಗೆ ನಷ್ಟವಾಗುತ್ತದೆ. ಈ ಬಗ್ಗೆ ಬ್ಯಾಂಕಿನ ಸಾಲದಬಡ್ಡಿಯನ್ನು ನಾವು ಕೊಡಬೇಕಾಗುತ್ತದೆ ಈ ಹಣವನ್ನು ರಾಜ್ಯಸರ್ಕಾರದವರು ಭರ್ತಿ ಮಾಡಿಕೊಡಬೇಕಾಗುತ್ತದೆಯೋ ಅಥವಾ ಕೇಂದ್ರ ಸರ್ಕಾರದವರು ಮಾಡಬೇಕಾಗುತ್ತದೆಯೋ ನೋಡಬೇಕು. ಆದ್ದರಿಂದ ನಷ್ಟಕ್ಕೆ ಹಲವಾರು ಸಮಸ್ಯೆಗಳು ಇರುತ್ತವೆ. ಇದನ್ನು ಒಂದೇ ಒಂದು ದೃಷ್ಟಿಯಿಂದ ನೋಡಿದರೆ ಕಷ್ಟವಾಗುತ್ತದೆ.

ಇನ್ನೊಂದು ವಿಚಾರವನ್ನು ಮಾನ್ಯಸದಸ್ಯರು ಹೇಳಿದ್ದಾರೆ. ಆಗ್ರೋ ಯೂನಿಯನ್‌ನ್ನು ಡೀ ರೆಕಗ್ನೈಸ್ ಏಕೆ ಮಾಡಿದರು ಎನ್ನುವುದು. ಇದು ಲೇಬರ್ ಡಿಪಾರ್ಟ್‌ಮೆಂಟಿಗೆ ಸಂಬಂಧಪಟ್ಟ ವಿಚಾರ ಇವರು ಕೋಡ್‌ಆಫ್ ಕಾಂಡಕ್ಟ್ ಫಾಲೋ ಮಾಡಿದ್ದಾರೋ ಇಲ್ಲವೋ ಗೊತ್ತಿಲ್ಲ ನಾನು ಇದರ ಬಗ್ಗೆ ಆಶ್ವಾಸನೆ ಕೊಡಲಿಕ್ಕೆ ಆಥವಾ ಇದನ್ನು ರೆಕಗ್ನೈಸ್ ಮಾಡಿಸುತ್ತೇನೆಂದು ಹೇಳಲಿಕ್ಕೆ ರೂಲ್ ೩೧೨ ರಲ್ಲಿ ಪ್ರಸ್ತಾಪ ಮಾಡತಕ್ಕ ವಿಷಯಕ್ಕೆ ಇದು ಸೀಮಿತವಾಗಿಲ್ಲ. ಮಾನ್ಯಸದಸ್ಯರುಗಳಿಗೆ ನಾನು ಎಲ್ಲಾ ಮಾಹಿತಿಯನ್ನು ಕೊಟ್ಟಿದ್ದೇನೆ. ಯಾವ ವಿಚಾರವನ್ನಾದರು ಮುಚ್ಚಿಟ್ಟಿದ್ದೇನೆಂದು ಹೇಳಿದರೆ ಅದನ್ನು ನಾನು ತಿದ್ದಿಕೊಳ್ಳುತ್ತೇನೆ. ಮಾನ್ಯಸದಸ್ಯರೂ ಇದರ ಬಗ್ಗೆ ಅಭ್ಯಾಸ ಮಾಡಿ ಯಾವ ರೀತಿಯಲ್ಲಿ ಇದನ್ನು ಸರಿಪಡಿಸಲಿಕ್ಕೆ ಸಾಧ್ಯ ಎಂದು ಸಲಹೆಯನ್ನು ಕೊಟ್ಟರೆ ನಾನು ಬಹಳ ಕೃತಜ್ಞತೆಯಿಂದ ಇದನ್ನು ನೋಡುತ್ತೇನೆ.

ಶ್ರೀ ಮಳ್ಳೂರು ಆನಂದರಾವ್ :—ನೌಕರರ ಪರಿಸ್ಥಿತಿಯ ಬಗ್ಗೆ ಏನೂ ಹೇಳಲಿಲ್ಲ.

ಶ್ರೀ ಕೆ.ಹೆಚ್. ರಂಗನಾಥ್ :—ನೌಕರರು ನಮಗೆ ನೋಟೀಸ್ ಕೊಡದೆ ಮುಷ್ಕರ ಮಾಡಬೇಕು ಎನ್ನುವ ತೀರ್ಮಾನವನ್ನು ತೆಗೆದುಕೊಂಡಿದ್ದಾರೆ. ಶ್ರೀ ವೆಂಕಟರಾವ್ ಅವರು ೧೨ನೇ ತಾರೀಖಿನ ಪತ್ರವನ್ನು ನನ್ನ ಮನೆಗೆ ಬಂದು, ವೈ.ಎಸ್. ಪಾಟೀಲರ ಜೊತೆಗೆ ಕೊಟ್ಟು ಹೋಗಿದ್ದಾರೆ. ನಾನೇ ಕೇಳಿದೆ ಕೆಲಸಕ್ಕೆ ಸೇರಿಗುವವರ ಮೇಲೆ ಕಲ್ಲು ಗಿಲ್ಲು ಬಿತ್ತು ಏಕೆ ಎಂದು. ಅವರೂ ಆಗಲೂ ಸಹ ಸ್ಟೈಕ್ ಮಾಡಿಸುತ್ತೇನೆ, ಎಂದು ಏನೂ ಹೇಳಲಿಲ್ಲ He cannot just go and sit on a hunger -strike.

ಶ್ರೀ ಎಸ್.ಆರ್. ಬೊಮ್ಮಾಯಿ :—ತಾವು ಈ ಪ್ರಶ್ನೆಯನ್ನು ಪ್ರತಿಷ್ಠೆಯ ಪ್ರಶ್ನೆಯನ್ನಾಗಿ ಮಾಡಬಾರದು. ತಾವು ಇದರ ಬಗ್ಗೆ ವಿವರವಾಗಿ ಚರ್ಚೆ ಮಾಡಲಿಕ್ಕೆ ಒಪ್ಪಿಕೊಂಡಿದ್ದೀರಿ, ನಾನು ಅದರ ಬಗ್ಗೆ ಹೆಚ್ಚು ಹೇಳುವುದಕ್ಕೆ ಹೋಗುವುದಿಲ್ಲ. ರೈತರಿಗೆ ಗೊಬ್ಬರ ಹಂಚತಕ್ಕ ಕಾರ್ಯ ಈಗ ನಡೆಯಬೇಕು ಎನ್ನುವ ಮಾತನ್ನು ನಾನೂ ಒಪ್ಪುತ್ತೇನೆ. ಆದರೆ ನೌಕರರು ತಮಗೆ ನೋಟೀಸ್ ಕೊಡಲಿಲ್ಲ, ಮ್ಯಾನೇಜ್‌ಮೆಂಟ್‌ಗೆ ನೋಟೀಸ್ ಕೊಟ್ಟಿದ್ದಾರೆ.

ಶ್ರೀ ಕೆ.ಹೆಚ್. ರಂಗನಾಥ್ :—ಮ್ಯಾನೇಜ್‌ಮೆಂಟಿಗೂ ನೋಟೀಸ್ ಕೊಟ್ಟಿಲ್ಲ. ಪತ್ರ ಬರೆದಿದ್ದಾರೆ ನಾನು ಅವರಿಗೆ ಬರೆದ ಪತ್ರದಲ್ಲಿ ೧೯೭೩, ೭೪, ೭೫, ೭೬ರಲ್ಲಿ ನಡೆದಂಥ ಅಕ್ರಮಗಳ ಬಗ್ಗೆ ನೀವು ಆಡಳಿತ ಮಂಡಳಿಗೆ ಆಗಲೀ, ಸರ್ಕಾರಕ್ಕೆ ಆಗಲೀ, ಏಕೆ ತಿಳಿಸಲಿಲ್ಲ ಎಂದು ಬರೆದಿದ್ದೇನೆ. ಆದರ ಪ್ರತಿಯೂ ಕೂಡ ನನ್ನ ಪತ್ರಿರ ಇದೆ.

ಶ್ರೀ ಎಸ್.ಆರ್. ಬೊಮ್ಮಾಯಿ :— ಏಂಪ್ಲಾಯೀಸ್ ಯೂನಿಯನ್‌ನ್ನು ಡೀರೆಕಗ್ನೈಸ್ ಮಾಡಿದರೆ ಅದು ಲೇಬರ್ ಡಿಪಾರ್ಟ್‌ಮೆಂಟಿಗೆ ಸಂಬಂದಪಟ್ಟ ವಿಚಾರ ಎಂದು ತಾವು ಹೇಳಿದ್ದೀರಿ. ಆದರೆ ಕಳೆದ ಹತ್ತು ವರ್ಷಗಳಿಂದ ಅದೇ ಸಂಸ್ಥೆಯ ಅಸೋಷಿಯೇಷನ್, ಸಂಸ್ಥೆಯ ಪ್ರಿವಿಸಸ್ ನಲ್ಲಿದ್ದೇ ನಡೆದುಕೊಂಡು ಬಂದಿದೆ. ಇದು ಸರಿಯೋತಪ್ಪೋ ಆಮೇಲೆ ನೋಡಬಹುದು. ಇವರು ಅಧಿಕಾರಕ್ಕೆ ಬಂದಮೇಲೆ ಇದು ರೆಕಗ್ನೈಸ್ ಆಗಿಲ್ಲವೆಂದು ಹೇಳಿ, ಬೀಗ ಮುದ್ರೆ ಹಾಕಿಸಿದರು. ಮತ್ತು ಅಸೊಸಿಯೇಷನ್‌ನವರು ತಮ್ಮ ಕಾಗದ ಪತ್ರಗಳನ್ನು ತೆಗೆದುಕೊಳ್ಳದ ಇರತಕ್ಕಪರಿಸ್ಥಿತಿಯನ್ನು ಉಂಟುಮಾಡಿದರು. ಈ ವಿಷಯವನ್ನು ತಮ್ಮ ಗಮನಕ್ಕೆ ತಂದಿದ್ದಾರೆಯೇ? A legally recognised union has been de-recognised and the office is closed. Their argument is : We continue to be a legal union ಇದಂ ಅವರಿಗೆ ಪ್ರಚೋದನೆಯಾಗುವುದಿಲ್ಲವೇ ? ನಾನಂ ಇವರ ಮೆರಿಟ್ಸ್ ಅಥವಾ ಡೀಮೆರಿಟ್ಸ್‌ಬಗ್ಗೆ ಮಾತನಾಡುವುದಕ್ಕೆ ಹೋಗುವುದಿಲ್ಲ. ಆಲ್ಲಿಯ ಮ್ಯಾನೇಜಿಂಗ್ ಡೈರೆಕ್ಟರ್ ಅವರಿಗೆ ನೋಟೀಸ್ ಕೊಟ್ಟಿದ್ದಾರೆ. ಆದ್ದರಿಂದ ತಾವು ಈ ವಿಷಯದಲ್ಲಿ ಯಾವ ಪ್ರತಿಷ್ಠೆಗೂ ಒಳಗಾಗದೆ, ರೈತರ ಹಿತದೃಷ್ಟಿಯಿಂದ, ಸಂಸ್ಥೆಯ ಹಿತದೃಷ್ಟಿಯಿಂದ ನೌಕರರು ಮುಷ್ಕರವನ್ನು ಹಿಂದಕ್ಕೆ ತೆಗೆದುಕೊಳ್ಳುವಂತೆ ಹೇಳಬೇಕು ತಾವು ನಾಳೆಯೇ ಅವರ ಪ್ರತಿನಿಧಿಗಳನ್ನು ಕರೆಯಿಸಿ ಅವರ ಬೇಡಿಕೆಗಳು ಏನು ಇವೆ, ಅವುಗಳು ನ್ಯಾಯವಾದ ಬೇಡಿಕೆಗಳಾಗಿದ್ದರೆ ತಮ್ಮ ಅಂತಃಕರಣದಿಂದ ಅವರಿಗೆ ಬರವಸೆ ಕೊಟ್ಟು ಉಪವಾಸ ಮುಷ್ಕರವನ್ನು ನಿಲ್ಲಿಸಲಿಕ್ಕೆ ರೈತರಿಗೆ ಸಮಾಧಾನಕ್ಕೆ ಸರಿಯಾಗಿ ಎಲ್ಲಾ ಸರಕುಗಳು ಸಿಕ್ಕುವಂತೆ ವ್ಯವಸ್ಥೆ ಮಾಡಬೇಕು ಎಂದು ನಾನು ತಮ್ಮಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ಕೆ.ಎಚ್. ರಂಗನಾಥ್.— ಅವರ ಬೇಡಿಕೆಗಳು ಈಗ ನಮ್ಮ ಮುಂದಿಲ್ಲ. ಈ ಹಂತದಲ್ಲಿ ಅವರನ್ನು ಕೇಳಿಕೊಳ್ಳುವುದಿಷ್ಟೆ, ಅವರು ಉಪವಾಸ ಸತ್ಯಾಗ್ರಹ ಮಾಡುವುದನ್ನು ನಿಲ್ಲಿಸಿ ರೈತರಿಗೆ ಸಹಾಯ ಮಾಡಬೇಕು ಎಂದು. ತಾವು ರೆಕಗ್ನೈಜ್ ಬಗ್ಗೆ ಹೇಳಿದ್ದೀರಿ. ಅದನ್ನು ನಾನು ವಿಚಾರ ಮಾಡುತ್ತೇನೆ. ಆದರೆ ಕಾನೂನಿನ ಚೌಕಟ್ಟಿನಲ್ಲಿ ಇದರ ಬಗ್ಗೆ ತೆಗೆದುಕೊಂಡಿರುವ ಕ್ರಮ ಸರಿಯೋ ಅಥವಾ ತಪ್ಪೋ ಎಂದು ನನಗೆ ನಿರ್ಣಯ ಕೊಡುವ ಅಧಿಕಾರವಿಲ್ಲ. ಅವರು ದಯಮಾಡಿ ಕೆಲಸಕ್ಕೆ ಹೋಗಲಿ : ಅಲ್ಲಿ ಆಗಿರುವಂತ ನಷ್ಟಗಳ ಬಗ್ಗೆ ಸರ್ಕಾರ ಕ್ರಮ ಕೈಗೊಳ್ಳಬೇಕೆಂದು ಅವರು ಸ್ಟೆಕ್ ಮಾಡುತ್ತಿದ್ದಾರೆಂದು ನಾನು ಪತ್ರಿಕೆಯಲ್ಲಿ ಓದಿ ತಿಳಿದುಕೊಂಡಿದ್ದೇನೆ. ಈ ಬಗ್ಗೆ ಅವರು ಎಲ್ಲ ಅಂಕಿಅಂಶಗಳನ್ನು ತಮಗೆ ಕೊಟ್ಟಿದ್ದಾರೋ ಅಥವಾ ಇಲ್ಲವೋ ನನಗೆಗೊತ್ತಿಲ್ಲ. ಆದರೆ ನಾನು ಇದರ ಬಗ್ಗೆ ಕೆಲವು ವಿಚಾರಗಳನ್ನು ಹೇಳಿದ್ದೇನೆ. ಯಾರ ಯಾರ ಬಗ್ಗೆ ಕ್ರಮ ತೆಗೆದುಕೊಳ್ಳಲಾಗಿದೆ ಎಂಬುದನ್ನು ಸಹ ಹೇಳಿದ್ದೇನೆ. ಈ ರೀತಿ ನಾನು ಇದರ ಬಗ್ಗೆ ವೈಟ್ ಪೇಪರ್ ಕೊಟ್ಟರುವಾಗ ಅವರು ಕೆಲಸಕ್ಕೆ ವಾಪಸ್ ಹೋಗಬೇಕೆಂದು ಈ ಸಭೆಯ ಮುಖಾಂತರ ಕೇಳಿಕೊಳ್ಳುತ್ತೇನೆ. ಅವರು ನನ್ನ ಹತ್ತಿರ ಮಾತನಾಡಲು ಬಂದರೆ ನಾನು ಬೇಡ ಎಂದು ಹೇಳುವುದಿಲ್ಲ. ಒಂದಲ್ಲ ಹತ್ತು ಸಲ ಬೇಕಾದರೂ ಬಂದು ಮಾತನಾಡಲಿ I am prepared to talk to them. I don't stand on prestige.

ಶ್ರೀ ಮೈಕೇಲ್ ಬಿ. ಫರ್ನಾಂಡೀಸ್ :—ಈಗ ಡೀ-ರೆಕಗ್ನೈಜ್ ಮಾಡಿರುವಂತಹ ಪ್ರಶ್ನೆಯನ್ನು ತೀರ್ಮಾನ ಮಾಡಲು ತಾವು ಲೇಬರ್ ಡಿಪಾರ್ಟ್‌ಮೆಂಟ್‌ಗೆ ಹೇಳಬೇಕು. ಇಷ್ಟಿದ್ದರೆ ಈಗ ಅವರಿಗೆ ಆಗಿರುವ ಅನ್ಯಾಯದ ಬಗ್ಗೆ ಅಲ್ಲಿನ ಮೇನೇಜ್‌ಮೆಂಟ್‌ನವರೇ ತೀರ್ಮಾನ ತೆಗೆದುಕೊಂಡಂತೆ ಆಗುತ್ತದೆ. That you can decide right now. You can refer it to the Labour Department.

SRI K.H. RANGANATH.—I would look into it I am not so well perfect in the labour laws as the hon. Member Mr. Fernandes.

SRI MICHEL B. FERNANDES.—Then you can accept my advice.

SRI K.H. RANGANATH.—I have to some extent and not fully.

ಶ್ರೀ ಪಿ. ರಾಮ್‌ದೇವ್.—ನೆನ್ನೆದಿವಸ ತಮಗೂ ಮತ್ತು ಮಾನ್ಯ ಕಾರ್ಮಿಕ ಮಂತ್ರಿಗಳಿಗೂ ಆಲಂಪಲ್ಲಿ ವೆಂಕಟರಾಮ್ ಅವರು ಒಂದು ಲೆಟರನ್ನು ಸಬ್‌ಮಿಟ್ ಮಾಡಿದ್ದಾರೆ. ಅದರಲ್ಲಿ ಈ ರೀತಿ ಹೇಳಿದ್ದಾರೆ

"The Association is on indefinite strike from 16-4-1979 pressing for the following matters.—

Since the Management of the Karnataka Agro-Industries Corporation Limited are not ready to co-operate with the genuine demands of the employees and went to the extent of practising anti-trade union activities and shown scant respect to the labour machinery of the Government of Karnataka by not attending the meeting called by the Labour Commissioner on 8-3-1979, 14-3-1979 etc.....

ಈ ರೀತಿ ಅವರು ತಮಗೆ ಕಾಗದ ಬರೆದಿದ್ದಾರೆ.

ಶ್ರೀ ಕೆ.ಎಚ್. ರಂಗನಾಥ್.—ನನ್ನೆದಿವಸ ತಾರೀಕು ೧೮, ಇಂದು ೧೯, ಆ ಪತ್ರ ನನಗೆ ಇನ್ನೂ ಬಂದಿಲ್ಲ. ಮಾನ್ಯ ಫರ್ನಾಂಡೀಸ್ ಅವರು ಬಹಳ ಕಾಲದಿಂದ ಟ್ರೇಡ್ ಯೂನಿಯನ್‌ನಲ್ಲಿ ಇದ್ದುಕೊಂಡು ಕೆಲಸ ಮಾಡಿ ಅನುಭವ ಪಡೆದಿದ್ದಾರೆ. ಆದರೆ ಆಲಂಪಲ್ಲಿ ವೆಂಕರಾಮ್ ಅವರಿಗೆ ಈ ಕ್ಷೇತ್ರದಲ್ಲಿ ಅಷ್ಟು ಅನುಭವವಿಲ್ಲ ; ಆದಕಾರಣ ಅವರು ಇವರ ಜೊತೆಗೆ ಸೇರಿಕೊಂಡು ಕೆಲಸ ಮಾಡುವುದನ್ನು ಕಲಿಯಲಿ.

ಶ್ರೀ ಮೈಕೇಲ್ ಬಿ. ಫರ್ನಾಂಡಿಸ್.—ನಾನೂ ಮುತ್ತು ಅವರು ಒಟ್ಟಿಗೆ ಕೆಲಸ ಮಾಡುತ್ತಿದ್ದೇವೆ.

ಶ್ರೀ ಕೆ.ಎಚ್. ರಂಗನಾಥ್.—ನನಗೆ ಮಾನ್ಯ ಫರ್ನಾಂಡಿಸ್ ಅವರ ಪರಿಚಯವಾದಾಗ ಅವರ ಜೊತೆಯಲ್ಲಿ ಶ್ರೀ ಆಲಂಪಲ್ಲಿ ವೆಂಕಟರಾಮ್ ಅವರು ಇರಲಿಲ್ಲ. ನಿನ್ನೆದಿವಸ ಅವರು ನನಗೆ ಪತ್ರ ಬರೆದಿದ್ದಾರೆಂದರೆ, ಅದು ನನಗೆ ಬರುವುದಕ್ಕೆ ಮೊದಲೆ. ನಾನು ಅದರ ಬಗ್ಗೆ ಏನು ಹೇಳಲಿ ?

ಶ್ರೀ ಎಸ್.ಆರ್. ಬೊಮ್ಮಾಯಿ.—ಈ ವಿಚಾರದಲ್ಲಿ ತಾವು ನಮಗೆ ಸರಿಯಾದ ಮಾಹಿತಿ ಕೊಡಬೇಕು. ಏಕೆಂದರೆ, ಲೇಬರ್ ಕಮಿಷನರ್ ಅವರು ರೀ-ಕನ್ಸಿಲಿಯೇಷನ್‌ಗೆ ಕರೆದರೂ ಸಹ ಮೇನೇಜ್‌ಮೆಂಟ್‌ನವರು ಹೋಗುವುದಿಲ್ಲ. ಈಗಾಗಲೇ ಆರು ಸಿಟಿಂಗ್ಸ್ ಆಗಿದೆ. ಒಂದು ಸಲ ಸೆಕ್ರೆಟರಿಯವರು ಹೋಗಿ ಚೇರ್‌ಮನ್ ಅವರು ತಮಗೆ ಅಧಿಕಾರ ಕೊಟ್ಟಿಲ್ಲವೆಂದು ಹೇಳಿದ್ದಾರೆ. ಇದರ ಅರ್ಥವಾದರೂ ಏನು ?

ಶ್ರೀ ಕೆ.ಎಚ್. ರಂಗನಾಥ್.—ನನಗೆ ಬಂದಿರುವ ವರ್ತಮಾನದ ಪ್ರಕಾರ ಹೇಳಬೇಕೆಂದರೆ ಇವರು ಫ್ಯಾಕ್ಟರಿಯೊಳಗೇ ತಪ್ಪು ಚಟುವಟಿಕೆಗಳನ್ನು ನಡೆಸಿದ್ದರಿಂದ, ಅವರ ಯೂನಿಯನ್ನನ್ನು ಡೀ-ರೆಕಗ್ನೈಜ್ ಮಾಡಿದರು ಎಂದು. ಇದಕ್ಕೆ ನಾನು ಹೆಚ್ಚಿನ ಮಹತ್ವವನ್ನು ಕೊಟ್ಟಿಲ್ಲ. ಮುಖ್ಯವಾಗಿ ಇಲ್ಲಿ ನೀವು ನಿಮಗೆ ತಿಳಿದಿದ್ದನ್ನು ಹೇಳಿದರೆ, ನನಗೆ ತಿಳಿದಿದ್ದನ್ನು ನಾನು ಹೇಳಿದರೆ ಅದರಿಂದ ಏನೂ ಉಪಯೋಗವಾಗುವುದಿಲ್ಲ. ಅಲ್ಲದೆ ಲೇಬರ್ ಯೂನಿಯನ್ನನ್ನು ಡೀ-ರೆಕಗ್ನೈಜ್ ಮಾಡಿದ್ದು ಸರಿಯಲ್ಲ ಎನ್ನುವುದು ಅವರ ಅಭಿಪ್ರಾಯವಾಗಿದ್ದರೆ, ಅದರ ವಿರುದ್ಧ ಕೋರ್ಟಿಗೆ ಹೋಗುವುದಕ್ಕೆ ಬರುತ್ತದೆ.

ಶ್ರೀ ಮೈಕೇಲ್ ಬಿ. ಫರ್ನಾಂಡಿಸ್.—ಫ್ಯಾಕ್ಟರಿಯೊಳಗೆ ಲೇಬರ್ ಆಕ್ಟಿವಿಟೀಸ್ ಮಾಡಬಾರದೆಂದು ಎನ್ನುವುದಾದರೆ, ನೂರಕ್ಕೆ ನೂರರಷ್ಟು ಯೂನಿಯನ್‌ಗಳನ್ನು ಡಿ-ರೆಕಗ್ನೈಜ್ ಮಾಡಬೇಕಾಗುತ್ತದೆ. ಈ ವಿಚಾರದಲ್ಲಿ ಅಲ್ಲಿನ ಅಧಿಕಾರಿಗಳು ತಮಗೆ ಸರಿಯಾದ ಮಾಹಿತಿಯನ್ನು ಕೊಟ್ಟಿಲ್ಲ.

SRI K.H. RANGANATH.—That is why I restraint myself. I said I would enquire into it. I never want to say off hand what has happened and why it was so.

SRI S R. BOMMAI.—The Management has not attended six times. The Labour Department will decide whether the derecognition is legal or illegal. The Management must attend the conciliation talks. If they failed to attend the conciliation talks, it amounts to harassing

the workers. ಈ ದೃಷ್ಟಿಯಿಂದ ಅವರು ತಮಗೆ ಕಾಗದ ಬರೆದಿದ್ದಾರೆ. ಅದರ ಬಗ್ಗೆ ತಾವು ಅವರನ್ನು ಕರೆಸಿ ಮಾತನಾಡಬೇಕು. ಈಗ ಅವರು ಉಪವಾಸ ಮುಷ್ಕರವನ್ನು ಅಂತ್ಯ ಮಾಡಬೇಕೆಂದು ತಾವು ಕೇಳಿಕೊಂಡಿದ್ದೀರಿ ನಾನೂ ಸಹ ಕೇಳಿಕೊಳ್ಳುತ್ತೇನೆ.

ಶ್ರೀ ಮೈಕೇಲ್ ಬಿ. ಫರ್ನಾಂಡಿಸ್.—ರಿಕನೇ ತಾರೀಖು ರೀ-ಕನ್ಸಿಲಿಯೇಷನ್‌ಗೆ ಬರಬೇಕೆಂದು ಮೇನೇಜ್‌ಮೆಂಟಿಗೆ ಲೇಬರ್ ಡಿಪಾರ್ಟ್‌ಮೆಂಟಿನಿಂದ ನೋಟೀಸ್ ಬಂದಿದೆ, ಆದರೆ ಮೇನೇಜ್‌ಮೆಂಟ್ ನವರು ಹೋಗಿಲ್ಲ. ಆದರೆ ಕಾರ್ಮಿಕರ ಕಡೆಯಿಂದ ಹೋಗಿದ್ದಾರೆ.

ಶ್ರೀ ಕೆ.ಎಚ್. ರಂಗನಾಥ್.—ಈಗ ಸದ್ಯಕ್ಕೆ ನಮ್ಮ ಮುಂದಿರುವ ಪ್ರಶ್ನೆ ಏಂದರೆ, ರೂಲ್ ೩೧೨ರ ಕೆಳಗೆ ಅಲ್ಲಿ ನಷ್ಟ ವಗೈರೆ ಆಗಿರತಕ್ಕಂಥ ವಿಷಯ ನಮ್ಮ ಮುಂದಿದೆ. ಇದು ಅಷ್ಟಕ್ಕೇ ಸೀಮಿತ ವಾಗಿದೆ. ಮುಂದೆ ಬೇಕಾದರೆ ವ್ಯಾಪಕವಾಗಿ ಇದರ ಬಗ್ಗೆ ಚರ್ಚೆ ಮಾಡೋಣ. ಈಗ ಈ ಸಭೆಯ ಮುಖಾಂತರ ಅವರು ಮುಷ್ಕರ ನಿಲ್ಲಿಸಬೇಕೆಂದು ತಾವು ಕೇಳಿಕೊಂಡಿದ್ದೀರಿ, ನಾನು ಸಹ ಕೇಳಿ ಕೊಂಡಿದ್ದೇನೆ.

MADAM DEPUTY SPEAKER.—The Hon. Minister has alreadyreplied sufficently. I will close that matter. I will go to next item. Sriyuths B.V. Kakkilaya and pampapathi to raise a matter under rule 312.

(*ii*). *re : Assaulton workers of Shailendra Employees by Security men of Hegde and Gole Company.*

ಶ್ರೀ ಬಿ. ವಿ. ಕಕ್ಕಿಲಾಯ .—ವೈಟ್ ಫೀಲ್ಡ್‌ನಲ್ಲಿ ಶೈಲೇಂದ್ರ ಎಂಬ ಉದ್ಯಮ ಸಂಸ್ಥೆ ಇದೆ. ಇದು ಹೆಗಡೆ ಹಾಗೂ ಗೋಲೆ ಕಂಪನಿಗೆ ಸೇರಿದ ಸಬ್ಸಿಡಿಯರಿ ಕಂಪನಿಯಾಗಿದೆ. ಇತ್ತೀಚೆಗೆ ಶ್ರೀಶೈಲಾ ಎಂಟರ್‌ಪ್ರೈಸಸ್‌ನವರು ಮತ್ತು ಶೈಲೇಂದ್ರ ಉದ್ಯಮ ಸಂಸ್ಥೆಯವರು ಸೇರಿಕೊಂಡು ಒಂದು ಯೂನಿಯನನ್ನು ಸ್ಥಾಪನೆ ಮಾಡಿದರು. ಈ ರೀತಿ ಸ್ಥಾಪನೆ ಮಾಡಿದಾಗ ಈ ಯೂನಿಯನ್‌ನ ಅಧ್ಯಕ್ಷರನ್ನು ಹಾಗೂ ಆಫೀಸ್ ಬೇರರ್ಸನ್ನು ಮೇನೇಜ್‌ಮೆಂಟಿನವರು ಕೆಲಸದಿಂದ ಕಿತ್ತು ಹಾಕಿದರು. ನಂತರ ಯೂನಿಯನ್‌ನವರು ಮೇನೇಜ್‌ಮೆಂಟ್‌ಜೊತೆ ಮಾತನಾಡುವುದಕ್ಕೆ ಹೋದಾಗ ಅವರನ್ನು ತಾತ್ಸಾರದಿಂದ ಕಂಡು ಒಳಗಡೆ ಹೋಗಿ ಮಾತನಾಡುವುದಕ್ಕೇ ಬಿಡಲಿಲ್ಲ. ನಂತರ ಇವರು ಹೆಗಡೆ ಹಾಗೂ ಗೋಲೆ ಕಂಪನಿಯ ಸಮೀಪ ಹೋಗಿ ಅಲ್ಲಿನ ಮೇನೇಜ್‌ಮೆಂಟಿನವರಿಗೆ ಮನವಿ ಕೊಡುವುದಕ್ಕೆ ಹೋದರು. ಆಗ ಆ ಕಂಪನಿಯ ವಾಚ್ ಆಂಡ್ ವಾರ್ಡ್ ಮತ್ತು ಇತರೇ ಕೆಲವು ಗೂಂಡಾಗಳು ಸೇರಿಕೊಂಡು ಮನವಿ ಕೊಡಲು ಹೋದವರಿಗೆ ಸಿಕ್ಕಾಪಟ್ಟೆ ಹೊಡೆದಿದ್ದಾರೆ. ಬಹಳ ದೊಡ್ಡ ದೌರ್ಜನ್ಯ ನಡೆಸಿದ್ದಾರೆ. ಐಜನ ಕೆಲಸಗಾರರಿಗೆ ಗಾಯಗಳಾಗಿವೆ. ಈ ವಿಷಯ ತಿಳಿದ ಸಬ್‌ಇನ್ಸ್‌ಪೆಕ್ಟರ್ ಅವರು ಅಲ್ಲಿಗೆ ಹೋಗಿ ಹೆಚ್ಚಿನ ಗಾಯಗಳಾಗಿದ್ದ ಇಬ್ಬರು ಕೆಲಸಗಾರರನ್ನು ಕೂಡಲೇ ಆಸ್ಪತ್ರೆಗೆ ಅಡ್ಮಿಟ್ ಮಾಡಿಸಿದ್ದಾರೆ. ಈ ಬಗ್ಗೆ ಅಲ್ಲಿನ ನೌಕರರು ಕಂಪ್ಲೇಂಟ್ ಕೊಟ್ಟರೂ ಸಹ ಇಲ್ಲಿಯವರೆಗೆ ಪೋಲೀಸಿನವರು ವಾಚ್ ಆಂಡ್ ವಾರ್ಡ್ ಮೇಲಾಗಲೀ ಗೂಂಡಾ ಜನರ ಮೇಲಾಗಲೀ ಯಾವುದೇ ಕ್ರಮ ತೆಗೆದುಕೊಂಡಿಲ್ಲ ಮತ್ತು ಕೇಸನ್ನು ರಿಜಿಸ್ಟರ್ ಸಹ ಮಾಡಿಲ್ಲ ಈ ರೀತಿ ಫ್ಯಾಕ್ಟರಿಯ ಕೆಲಸಗಾರರು ಲಾ ಅಂಡ್ ಆರ್ಡರನ್ನು ತಮ್ಮ ಕೈಗೆತೆಗೆದು ಕೊಂಡು ದೌರ್ಜನ್ಯ ನಡೆಸುತ್ತಿದ್ದಾರೆ. ಕಾರ್ಮಿಕರುಗಳು, ಕೆಲಸಗಾರರು ಸಂಘಟನೆಯಿಂದ ತಮ್ಮ ನ್ಯಾಯವಾದ ಬೇಡಿಕೆಗಳನ್ನು ಶಾಂತರೀತಿಯಲ್ಲಿ ಕೇಳಬೇಕೇ ಹೊರತು ಈ ರೀತಿ ವ್ಯವಹರಿಸಿದರೆ ಬಹಳ ಕಷ್ಟವಾಗುತ್ತದೆ. ಲಾ ಅಂಡ್ ಆರ್ಡರ್ ಕೆಟ್ಟುಹೋದರೆ ಅಡಳಿತ ವರ್ಗದವರಿಗೆ ಬಹಳ ದೊಡ್ಡ ಜವಾಬ್ದಾರಿಯಾಗುತ್ತದೆ. ಈ ಬಗ್ಗೆ ಸೂಕ್ತ ಕ್ರಮ ತೆಗೆದುಕೊಳ್ಳಬೇಕು. ಮತ್ತು ಮ್ಯಾನೇಜ್‌ಮೆಂಟಿನವರು ಇದರಲ್ಲಿ ಸೇರಿಕೊಂಡು ಇದನ್ನು ಒಂದು ದೊಡ್ಡಬಿಸ್ಸಿಗೆ ತರಬೇಕೆಂದು ಸರ್ಕಾರದವರಿಗೆ ಕೇಳಿಕೊಳ್ಳುತ್ತೇನೆ.

೧೨-೦೦ ಮಧ್ಯಾಹ್ನ

†SRI K. H. RANGANATH (on behalf of SRI D. Devaraj Urs).—I wish to make the following statement —On 11th April 1979 at about 5.00 P.M 3 or 4 workers belonging to Shailendra Enterprises situated